number of independents, did make a suggestion that increased salary should not be asked. Being in the Opposition, we should not be inconsistent with the stand that we had taken in respect of this matter. We should not be looked upon as changing our views. As regards the point that a certain extraordinary situation has arisen, I feel nothing extraordinary has taken place which did not exist when this matter came up in 1957-58. I do not see any difference which warrants the salary to be increased. The same situation which obtained then obtains now. In view of that, I do not feel that it is correct for us to consider this matter.

Sri B. D. JATTI (Chief Minister).—Sir on this issue the Government wants to remain neutral. The Government will not express its views either for or against. But looking to the trend of discussion so far it appears to me that nobody is prepared to oppose it except perhaps the Hon'ble Member Sri Narasimhan. Others want to keep silent. If I have understood Sri Narasimhan correctly, the trend of his speech, appears to be that he does not wish to support it. So, I will take into consideration the view-points of the House and the sense of the House will have to be considered by the Government. This is what I want to say. A word regarding the view-point expressed by my Hon'ble friend, the Member of the Opposition. All along he was trying to argue just like an advocate.

11 A.M.

He wanted perhaps to say 'Yes' for the Resolution and as he happened to be the Leader of the Opposition, he wanted to throw the blame on the Congress Party. He all along presumed that he was only honest and others might or might not be honest. Intelligence can be purchased, but not honesty. It is not the monopoly of any person to say that he is honest; others also can equally say that they are honest.

Mr. SPEAKER.—The question is:

"That the present salary of Rs. 150 per mensem given to members of the Mysore Legislature being inadequate to meet the reasonable expenditure for carrying out their duties, this Assembly recommends to Government to take necessary action to amend the existing legislation and provide for payment of an additional amount of Rs. 100 a month and also to provide for free medical aid to the members of their family."

The motion was adopted.

NON-OFFICIAL BILL.

Sri J. B. MALLARADHYA (Nanjangud).—Sir, I beg to move for leave to introduce the Bangalore City Tenants Protection Bill, 1959.

Mr. SPEAKER.—The question is:

"That leave to introduce the Bangalore City Tenants Protection Bill, 1959 be granted."

The motion was adopted

Mr. SPEAKER.—The Bill is introduced.

NON-OFFICIAL RESOLUTION *re*: CHANGING THE NAME OF THE STATE FROM "MYSORE" TO "KARNATAK"

(Debate continued.)

†ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸ್ಪಾಮೀ, ಈ ಸಭೆಯ ಮುಂದಿರುವ ನಿರ್ಣಯಕ್ಕೆ ನಾನು ಹೃತ್ಪೂರ್ವಕವಾದ ಸ್ವಾಗತವನ್ನು ಬಯಸುತ್ತೇನೆ. ಹಾಗೂ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಈ ನಿರ್ಣಯವು ಯಾವ ವ್ಯಕ್ತಿಯಿಂದ ಬಂದಿದೆ, ಯಾವ ಪಕ್ಷದಿಂದ ಬಂದಿದೆ ಎನ್ನುವ ಮಾತನ್ನು ನಾನು ವಿಚಾರಮಾಡುವುದಿಲ್ಲ.

[MR. DEPUTY SPEAKER in Chair.]

ಈಗ ಈ ಪ್ರಶ್ನೆ ಯಾವುದೇ ಒಂದು ಪಕ್ಷದಿಂದ, ಯಾವುದೇ ಒಂದು ವ್ಯಕ್ತಿಯಿಂದ ನಿರ್ಮಾಣವಾಗತಕ್ಕದ್ದಲ್ಲ. ಇದು ಯಾವುದೇ ಒಂದು ವ್ಯಕ್ತಿಗೆ, ಯಾವುದೇ ಒಂದು ಪಕ್ಷಕ್ಕೆ ಸಂಬಂಧಪಟ್ಟ ವಿಷಯವಲ್ಲ. ಇದು ನಮ್ಮ ರಾಜ್ಯದ ಎರಡು ಕೋಟಿ ಜನಾಂಗದ ಪ್ರಶ್ನೆಯಾಗಿದೆ ಯಾರೊಬ್ಬರಿಗೂ ನೋವುಂಟಾಗದಂತೆ ನನ್ನ ಅಭಿ ಪ್ರಾಯಗಳನ್ನು ಮಾತ್ರ ಈ ಸಭೆಯ

(ಶ್ರೀ ಎ. ಜೆ. ದೊಡ್ಡಮೇಟಿ)

ಮುಂದೆ ಇದುತ್ತೇನೆ. ತತ್ಪೂರ್ವದಲ್ಲಿ 30-9-59 ರಲ್ಲಿ ನಾನೇ ಈ ಗೊತ್ತುವಳಿಯನ್ನು ತಂದಾಗ ಅನೇಕ ವಾದ ವಿವರಗಳನ್ನು ಈ ಸಭೆಯ ಮುಂದೆ ಒದಗಿಸಿದ್ದೇನೆ. ಮತ್ತೆ ಈ ಬಗ್ಗೆ ಅವಶ್ಯಕವಾದ ಒಂದು ಪುಸ್ತಕವನ್ನು ಸಹ ಸದಸ್ಯರಿಗೆಲ್ಲ ನಾನುಕೊಟ್ಟಿದ್ದೆ. ಆ ಸಮಯದಲ್ಲಿ ನಮ್ಮ ಎಲ್ಲಾ ಅಭಿಪ್ರಾಯಗಳು ಬಂದಿವೆ. ಅಂತಹ ಅಭಿಪ್ರಾಯಗಳನ್ನು ಪುನರು ಚ್ಚಾರಮಾಡದೆ ಹೊಸದಾದ ಕೆಲವು ವಿಚಾರಗಳನ್ನು ಮಾತ್ರ ಹೇಳಲಿಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ.

ಸ್ವಾಮೀ, 30-9-59ರಲ್ಲಿ ಈ ನಿರ್ಣಯವು ಬಂದಾಗ ನಮ್ಮ ಈ ಅಧಿವೇಶನದಲ್ಲೇ ಸಾಧಾರಣವಾಗಿ ಮೂರು ಗಂಟೆಗಳ ವರೆಗೆ ಇದರ ಬಗ್ಗೆ ಚರ್ಚೆನಡೆಯಿತು. ಅನಂತರ ಇದರ ಬಗ್ಗೆ ಪತ್ರಿಕೆಗಳೂ ಕೂಡ ಒಳ್ಳೊಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿವೆ. ಸಾಮಾನ್ಯವಾಗಿ ನನಗೆ ಗೊತ್ತಿದ್ದಂತೆ ತಮಗೂ ಗೊತ್ತಿದ್ದಂತೆ ಇಂಗ್ಲಿಷು ಅಥವಾ ಕನ್ನಡದ ಯಾವ ಪತ್ರಿಕೆಯೂ ಇದನ್ನು ವಿರೋಧಿಸಿಲ್ಲ. ಎಲ್ಲರಿಗೂ ಈ ಸೂಚನೆಯ ಬಗ್ಗೆ ಸಂಪೂರ್ಣವಾಗಿ ಬೆಂಬಲವಿದೆಎನ್ನುವ ಮಾತನ್ನು ನಾವು ಗಮನಿಸಬೇಕು. ಅದೇ ರೀತಿ ಬೆಂಗಳೂರಿನ ಸಾಹಿತಿಗಳು ಮುಖ್ಯವಾಗಿ ಪೊದಲನಿಂದಲೂ ಈ ಕರ್ನಾಟಕ ರಾಜ್ಯ ನಿರ್ಮಾಣದ ಬಗ್ಗೆ ತಮ್ಮ ಅನುಕೂಲವಾದ ಅಭಿಪ್ರಾಯವನ್ನು ವ್ಯಕ್ತ ಮಾಡಿ ಪ್ರಕಟಣೆಗಳನ್ನು ಕೂಡ ತಂದಿದ್ದರು ಎನ್ನುವುದನ್ನು ತಾವು ನೋಡಬೇಕು. ಈ ಎಲ್ಲ ಪ್ರತಿಕ್ರಿಯೆಗಳ ಪರಿಣಾಮವಾಗಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ತನ್ನ ಅರಸೀಕೆರೆ ಅಧಿವೇಶನದಲ್ಲಿ ಈ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಎಂದು ಬದಲಾಯಿಸಲು ಗೊತ್ತುವಳಿಯನ್ನು ತರಲಾಗಿತ್ತು ಎನ್ನುವುದನ್ನು ನೋಡಿರಬಹುದು. ಇದೆ ರೀತಿ ಇನ್ನೂ ಎಷ್ಟೋ ಕಡೆಗಳಿಂದ ಅಭಿಪ್ರಾಯಗಳು ಬಂದಿವೆ. ಈ ಗೊತ್ತುವಳಿಯನ್ನು ಆಪಾದಮಸ್ತಕ ವಿರೋಧ ಮಾಡುತ್ತಿದ್ದವರೂ ಸಹ, ತಮ್ಮ ಭಾಷಣದಲ್ಲಿ "ಕರ್ನಾಟಕ" ಎನ್ನುವುದಕ್ಕೆ ನಮ್ಮವಿರೋಧವಿಲ್ಲ; ಬೇಕಾದರೆ ಬ್ರಾಕೆಟ್ಟಿನಲ್ಲಿ "ಕರ್ನಾಟಕ" ಎಂದು ಹಾಕಿಕೊಳ್ಳಿ ಎಂದು ಹೇಳಿದರು. ಅವರೆಲ್ಲರೂ ಯಾವ ರೀತಿಯಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಎನ್ನುವುದನ್ನು ಈ ಸಭೆಯಲ್ಲಿ ನಾವು ಈಗಾಗಲೇ ಕೇಳಿದ್ದೇವೆ. ಇನ್ನು ಬೇರೆ ಬೇರೆ ಸಂಘ ಸಂಸ್ಥೆಗಳೂ ಬಹಳ ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿವೆ. ನನ್ನ ತಿಳಿವಳಿಕೆಯ ಪ್ರಕಾರ ಯಾವುದೇ ಒಂದು ಪಕ್ಷದಲ್ಲ ನೀವು ಈ ಬಗ್ಗೆ ಒಂದು ಮತವನ್ನು ಕೇಳಿಪುದಾದರೆ ನಿಸ್ಸಂಶಯವಾಗಿ ತಮ್ಮ ಮೆಂಬರುಗಳ ಒಹುಮತದಿಂದ ಈ ನಿರ್ಣಯದ ಪರವಾಗಿಯೇ ತೀರ್ಮಾನ ಮಾಡುತ್ತಾರೆ. ಈ ಬಗ್ಗೆ ನೀವೆಲ್ಲರೂ ಒಪ್ಪುವಂತೆ ಆಗುತ್ತದೆ. ಕೆಲವರು ಹೇಳಬಹುದು. ಈ ಮಾತನ್ನು ಕೆಲವರ ಮನಸ್ಸು ನೋಯುವಹಾಗೆ ಅವರಿಗೆ ತೊಂದರೆ ಕೊಟ್ಟು ಈ ಪ್ರಶ್ನೆಯನ್ನು ನಿರ್ಣಯ ಮಾಡಬಾರದು. ಇದಕ್ಕೆ ಸ್ವಲ್ಪ ಕಾಲಾವಕಾಶಬೇಕು. ಎಂದು. ತಾತ್ಪರ್ಯವಾಗಿ ಇಂತಹ ವಾದಕ್ಕೆ ನಾವು ತಲೆ ಬಾಗಬೇಕಾಗುತ್ತದೆ. ಹೀಗಾಗಿ ಮೂರು ವರ್ಷಗಳಿಂದಲೂ ಈ ನಿರ್ಣಯವನ್ನು ತಳ್ಳುತ್ತ ತಳ್ಳುತ್ತ ಬಂದಿದೆ. ಈ ಪ್ರಸಂಗ ಪೊದಲು 30-9-59ಕಿಂತ ಹಿಂದಿನ ಅಧಿವೇಶನದಲ್ಲೇ ಎಂದರೆ ಬಡ್ಜೆಟ್ಟಿನ ಅಧಿವೇಶನದಲ್ಲೇ ಗೊತ್ತುವಳಿ ರೂಪದಲ್ಲಿ ಬಂದಿತ್ತು. ಆ ಹೊತ್ತು ಇದನ್ನು ಪರಿಶೀಲನೆ ಮಾಡಲಿಲ್ಲ. ಅದರಿಂದಾಗಿ ಆ ನಿರ್ಣಯ ಲ್ಯಾಪ್ಸ್ ಆಯಿತು. ಅನಂತರ ಸೆಪ್ಟಂಬರಿನ ಅಧಿವೇಶನದಲ್ಲಿ ಸಾಕಷ್ಟು ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅನಂತರ ಯಾವ ನಿರ್ಣಯವೂ ಅಂಗೀಕೃತವಾಗದೆ ರೆಸಲೂಷನ್ ಪುನಃ ಲ್ಯಾಪ್ಸ್ ಆಯಿತು, ಕಳೆದ ಅಧಿವೇಶನದ ಒಂದು ಮಾತನ್ನು ಲಕ್ಷದಲ್ಲಿಡಬೇಕು. ಈ ಸಭೆಗೆ 27 ಜನರು ಈ ನಿರ್ಣಯವನ್ನು ಕಳುಹಿಸಿದ್ದಾರೆ. ಈ 27 ಜನರಲ್ಲಿ ಹಳೆಯ ಮೈಸೂರಿಗೆ ಸೇರಿದಂತಹ ಸದಸ್ಯರು ಈ ಗೊತ್ತುವಳಿಯನ್ನು ಕಳುಸಿದ್ದರೆನ್ನುವುದನ್ನು ತಾವು ಲಕ್ಷದಲ್ಲಿಡಬೇಕು. ಇಪ್ಪೊತ್ತಿನ ದಿವಸ ಈ ನಿರ್ಣಯ ಬಂದಿರುವುದು ಹಳೆಯ ಮೈಸೂರಿಗೆ ಸೇರಿದ ಒಬ್ಬ ಮಾನ್ಯಸದಸ್ಯರಿಂದಲೇ ಬಂದಿದೆ ಎನ್ನುವುದನ್ನೂ ತಾವು ಲಕ್ಷ್ಯದಲ್ಲಿಡಬೇಕು.

Sri C. M. ARUMUGHAM (Kolar Gold Fields).—I rise to a point of order. When we are discussing such an important resolution, there is no Minister present.

Smt. LEELAVATI VENKATESH MAGADI (Deputy Minister for Rural Industries).—I am here to represent the Government.

Mr. DEPUTY SPEAKER.—There is the Deputy Minister. The Chief Minister will be coming now.

ಶ್ರೀ ಎ. ಜೆ. ದೊಡ್ಡಮೇಟಿ.—ಇದರ ಹಿನ್ನೆಲೆಯನ್ನು ವಿಚಾರ ಮಾಡಿನೋಡಿದರೆ ಎರಡು ಕೋಟಿ ಜನರ ಅಭಿಪ್ರಾಯ ಎತ್ತಕಡೆ ವಾಲುತ್ತದೆ ಎಂಬುದನ್ನು ತಿಳಿಯಬಹುದು. ಆದರೆ ಹಟಕ್ಕಾಗಿ ವಿರೋಧ ಮಾಡಬಾರದು ಮತ್ತು ಹಟಕ್ಕಾಗಿ ಬೆಂಬಲಕೊಡಬಾರದು. ಈ ಎರಡು ಮಾರ್ಗಗಳಲ್ಲಿ ಹಟವಿರಬಾರದೆಂಬುದನ್ನು ಒಪ್ಪುತ್ತೇನೆ. ಆದರೆ ಈ ಪ್ರಶ್ನೆಯನ್ನು ನಿರ್ಧರಿಸುವುದಕ್ಕೆ ಮುಂಚೆ ಯಾವ ಯಾವ ಅಂಶಗಳನ್ನು ಲಕ್ಷ್ಯದಲ್ಲಿಟ್ಟು ಈ ಪ್ರಶ್ನೆಯ ಮೇಲೆ ತೀರ್ಮಾನಕ್ಕೆ ಬರಬೇಕು, ನಿರ್ಧಾರಕ್ಕೆ ಬರಬೇಕು ಎನ್ನುವುದನ್ನು ವಿಚಾರ ಮಾಡೇಕಾಗುತ್ತದೆ ಆ ದೃಷ್ಟಿಯಿಂದ ವಿಚಾರ ಮಾಡುವಾಗ ಪೊದಲನೆಯದಾಗಿ ಈ ಗೊತ್ತುವಳಿಯನ್ನು ವಿರೋಧ ಮಾಡಿದವರ ಅಭಿಪ್ರಾಯವನ್ನು ಸ್ವಲ್ಪ ಪರಿಶೀಲನೆ ಮಾಡುವಾ. ಹೋದನಲ ಮತ್ತು ಈ ಸಲ ತೆರೆದ ಮನಸ್ಸಿನಿಂದ ಮುಕ್ತಮನಸ್ಸಿನಿಂದ ವಿರೋಧ ಮಾಡುವವರಲ್ಲಿ ಏನಾದರೂ points ಇವೆಯೆ ಎಂದು ವಿಚಾರ ಮಾಡತಕ್ಕ ಅಂಶ ಆ ಪ್ರಶ್ನೆಯಲ್ಲಿದೆ. ನಾನು ಧರ್ಮದೃಷ್ಟಿಯಿಂದ, ತೆರೆದಮನಸ್ಸಿನಿಂದ ಮುಕ್ತಮನಸ್ಸಿನಿಂದ ಇದನ್ನು ವಿಚಾರ ಮಾಡಿನೋಡಿದ್ದರಲ್ಲಿ ವಿರೋಧಮಾಡುವವರ ವಾದದಲ್ಲಿ ಯಾವ ಸತ್ವವೂ ಕಾಣಲಿಲ್ಲ. ನನ್ನ ಎಡಪಕ್ಕದಲ್ಲಿ ಕುಳಿತಿರುವ ಮಾನ್ಯ ಸದಸ್ಯರು ಈ ಗೊತ್ತುವಳಿಯನ್ನು ವಿರೋಧಮಾಡಿದರು. ಎಷ್ಟೋ ಸಲ ಅವರು ಮಾತನಾಡುವಾಗ I am opposing with all seriousness ಎಂದು ಹೇಳುತ್ತಿದ್ದರು. ಅವರ points ಏನೆಂದರೆ, ಹೆಸರಿನ ವಿಷಯದಲ್ಲಿ ಅಗ್ರಿಮೆಂಟ್ ಆಗಿದೆ, ಒಡಂಬಡಿಕೆಯಾಗಿದೆ. ಆ ಕಾರಣಕ್ಕಾಗಿ ಈ ಪ್ರಶ್ನೆಯನ್ನು ಪುನಃ ಎತ್ತುವುದು ಬೇಡ ಎಂದು ಡಿಕ್ಷನರಿಯಲ್ಲಿ ಇದಕ್ಕೆ ಒಂದು ಸರಳವಾದ ಅರ್ಥವಿದೆ. ಆದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಇದು

gentlemen's agreement ಎಂದು ಹೇಳಬಹುದು ಇದು ದೇಶಕ್ಕೆ ತಳಹದಿಯಾಗುವಂಥ ಪ್ರಶ್ನೆ. ಪ್ರಶ್ನೆ ಸಣ್ಣದು ಎಂದು ಹೇಳುವುದಿಲ್ಲ. ಇದು ಬಹಳ ಮಹತ್ವದ್ದು, ಅತಿ ಅವಶ್ಯವಾದದ್ದು. ಅವಶ್ಯವಷ್ಟೇ ಅಲ್ಲ, ಅನಿವಾರ್ಯವಾದುದು. ಇದನ್ನು ಇಂದಲ್ಲ, ನಾಳೆ ಒಪ್ಪಬೇಕಾಗುತ್ತದೆ. ಇಂಥ ಮಹತ್ವದ ಪ್ರಶ್ನೆಯ ಮೇಲೆ ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳಬಾರದೆಂದು ಹೇಳಿದರೆ ಒಪ್ಪುತ್ತೇನೆ. ಈ ವಿಷಯದ ಮೇಲೆ ಬಹಳ ವೇಳೆ ಹೋಗಿದೆ ಎಂದು ಕೆಲವು ಸದಸ್ಯರು ಹೇಳಿದರು. ನಾವು ಹಿಟ್ಟಿಗೆ ಚರ್ವಿತ ಚರ್ವಣ ಮಾಡದೆ ಇದನ್ನು ಒಪ್ಪಿಕೊಳ್ಳಬೇಕೆಂದು ನಿರ್ಣಯಮಾಡಿದರೆ ಈ ಪ್ರಶ್ನೆಗೆ ಹೆಚ್ಚಿನ ವೇಳೆ ಹಿಡಿಯುವುದಿಲ್ಲ.

ಮೈನೂರು ಎನ್ನುವ ಹೆಸರು ಎಂದೆಂದಿಗೂ ಬದಲಾಗಬಾರದು ಎಂದು ಒಪ್ಪಂದವಾಗಿದೆಯೇ ಅಥವಾ ಇಂತಿಷ್ಟು ಕಾಲ ಇರಬೇಕು ಎಂದು ಒಪ್ಪಂದ ವಾಗಿದೆಯೇ ಎಂದು ವಿಚಾರ ಮಾಡಬೇಕು. ಒಪ್ಪಂದ ವಾಗಿದೆ ಎಂದು ಹೇಳತಕ್ಕ ವಿಷಯಕ್ಕೆ ಅನೇಕ ಮಹಾಶಯರು ಅವಾಸ್ತವವಾದ ಮಹತ್ವವನ್ನು ಕೊಡುತ್ತಿದ್ದಾರೆ. ಆ ಒಪ್ಪಂದ ಯಾವುದೇ ರೀತಿಯಲ್ಲಿ ಆದದ್ದು ವಿಧಾನ ಸಭಾಸದಸ್ಯರಾದ ನಮಗೆ ಗೊತ್ತಿಲ್ಲ. ನಾವು ಕೇವಲ ಭಾರತ ಸರ್ಕಾರಕ್ಕೆ ಒಂದು ಸಿಫಾರ್ಸು ಮಾಡಬೇಕು ಎಂದು ಹೇಳುತ್ತಿದ್ದೇವೆ. ಸಿಫಾರಸು ಮಾಡಿದರೆ ನಮ್ಮ ಸಿಫಾರಸನ್ನು ಅವರು ಒಪ್ಪಬಹುದು ಅಥವಾ ಒಪ್ಪದೆ ಇರಬಹುದು. ಒಂದು ಮನೆಯೊಳಗೆ ಒಂದು ಮಗು ಜನಿಸಿದರೆ ತಾಯಿ ಒಂದು ಹೆಸರನ್ನಿಡಬೇಕೆಂದು ತಂದೆ ಇನ್ನೊಂದು ಹೆಸರಿಡಬೇಕೆಂದೂ ಅವರಿಬ್ಬರೊಳಗೆ ಒಂದು ವಾದಬಂದರೆ, ಕಡೆಯ ತೀರ್ಮಾನವಾಗತಕ್ಕದ್ದು ಅಜ್ಜನಿಂದ ಆದ್ಯಷ್ಟಿಯಿಂದ ನಾವು ಈ ಪ್ರಶ್ನೆಯಕಡೆಗೆ ಬಹಳ ವಿಶಾಲ ಮನಸ್ಸಿನಿಂದ, ನಿರಳ ಮನಸ್ಸಿನಿಂದ ನೋಡಬೇಕು. ಇದು ಯಾವುದೇ ಒಂದು ಪಕ್ಷದ ಪ್ರಶ್ನೆಯಲ್ಲ. ಇದನ್ನು ವಿರೋಧಪಕ್ಷದವರು ತಂದಿದ್ದಾರೆ. ಇದಕ್ಕೆ ಏಕೆ ಬೆಂಬಲ ಕೊಡಬೇಕೆನ್ನುವ ಪ್ರಶ್ನೆಯಲ್ಲ. ಕಾಂಗ್ರೆಸ್ ಪಕ್ಷತಂದರೆ ವಿರೋಧ ಪಕ್ಷ ವಿರೋಧಿಸಬೇಕೆಂಬ ಮಾತಲ್ಲ. ನೂರು ರೂಪಾಯಿಗಳಷ್ಟು ಶಾಸಕರ salary ಹೆಚ್ಚು ಮಾಡಬೇಕು ಎನ್ನುವ ಗೊತ್ತುವಳಿಗೆ ಒಪ್ಪಿಗೆಯನ್ನ ಕೊಟ್ಟು ಪಾಸ್‌ಮಾಡಿಕೊಂಡಿದ್ದೇವೆ. ಇದನ್ನು ತಂದವರು ಎದುರು ಪಕ್ಷದವರಾದರೂ ನಾವೆಲ್ಲರೂ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಈ ಪ್ರಶ್ನೆ ಪಕ್ಷದ ಪ್ರಶ್ನೆಯಲ್ಲ, ಇದರಲ್ಲಿ ಸರ್ಕಾರದವರು neutral ಇರುತ್ತಾರೆಂದು ಹೇಳಬಹುದು. ಆದರೆ ನನ್ನ ತಿಳಿವಳಿಕೆಯಲ್ಲಿ ಸರ್ಕಾರದವರು ಈ ಬಗ್ಗೆ ನ್ಯಾಯವಾದ ತೀರ್ಮಾನ ಮಾಡಬೇಕಾಗುತ್ತದೆ. ಇಲ್ಲವಾದರೆ ಸದಸ್ಯರಿಗೆ ಮತಸ್ವಾತಂತ್ರ್ಯವನ್ನು ಕೊಡಬೇಕಾಗುತ್ತದೆ. ಈ ಗೊತ್ತುವಳಿಯ ಬಗ್ಗೆ ವಿರೋಧಮಾಡುವುದರೊಳಗೆ ಯಾವುದೇ ಅರ್ಥವಿದೆ ಎಂದು ನನಗನ್ನಿಸುವುದಿಲ್ಲ.

ನನ್ನ ಇನ್ನೊಬ್ಬ ಸ್ನೇಹಿತರಾದ ಶ್ರೀಮಾನ್ ಆರ್ಮುಗಂ ಅವರು ಮೈನೂರಿಗೆ ಬಹಳ ಹೆಸರಿದೆ. ಪರದೇಶಗಳಲ್ಲೆಲ್ಲ 'ಮೈನೂರು' ಎಂದರೆ ವ್ಯಾಪಾರ ದೃಷ್ಟಿಯಿಂದ ಬಹಳ ಮುಂದುವರಿದದ್ದು ಮೈನೂರು ಸ್ಯಾಂಡಲ್ ಸೋಪ್, ಮೈನೂರು ಗಂಧದೆಣ್ಣೆ, ಗಂಧದ ಕಟ್ಟಿಗೆ ಹೀಗೆಲ್ಲ ಹೆಸರುವಾಸಿಯಾಗಿದೆ ಎಂದು ಹೇಳಿದರು. ಒಂದು ಮಾತನ್ನು ಅವರು ಮರೆತಿದ್ದಾರೆ. ಮೈನೂರು ಗಂಧದೆಣ್ಣೆ ಹೆಸರನ್ನೂ, ಮೈನೂರು ಸಾಬೂನಿನ ಹೆಸರನ್ನೂ ಬದಲು ಮಾಡಲು ಯಾರೂ ಕೇಳುತ್ತಿಲ್ಲ. ಮೈನೂರು ಗಂಧದ ಕಟ್ಟಿಗೆಗೆ ಕರ್ಣಾಟಕ ಗಂಧದ ಕಟ್ಟಿಗೆ ಎಂದೂ ಮೈನೂರು ಆನೆಗೆ ಕರ್ಣಾಟಕ ಆನೆಯೆಂದೂ ಕರೆಯಬೇಕೆಂದು ಹೇಳುತ್ತಿಲ್ಲ. ಇವೊತ್ತು ವ್ಯಾಪಾರದ ದೃಷ್ಟಿಯಿಂದ, ಯಾವ ರೀತಿಯಲ್ಲಿ ಹೆಸರಿಟ್ಟರೆ ಉಚಿತವೋ ಆ ರೀತಿ ನಡೆದು ಕೊಂಡುಹೋಗುವುದಕ್ಕೆ ಒಪ್ಪುತ್ತೇನೆ. ನಾನು ಒಬ್ಬ ಮೈನೂರಿನವ ಎಂದು ಹೇಳಿಕೊಳ್ಳಲಿಕ್ಕೆ ಅಸಮಾಧಾನ ವಿಲ್ಲ. ಆದರೆ ಹೆಚ್ಚು ಮಾನಸಿಕ ಏಕೀಕರಣವಾಗುವುದಕ್ಕೆ, ಇಂಥ ಪ್ರಶ್ನೆಗಳನ್ನು ಮುಂದೊಡ್ಡಿದರೆ, ತೊಂದರೆಯಾಗುತ್ತದೆಂದು ಹೇಳುತ್ತೇನೆ.

ಮೈನೂರು ಹಿಂದಿನ ಮಹಿಷ ಮಂಡಳ ಅಥವಾ ಮಾಹಿಷ್ಮತೀ ನಗರವಾಗಿತ್ತು ಎನ್ನುವುದು ವಾದ ಗ್ರಸ್ತವಾದ ಅಂಶ. ನಿನ್ನೆಯ ದಿನದ 'ಪ್ರಜಾವಾಣಿ' ಪತ್ರಿಕೆಯಲ್ಲಿ ಒಂದು ಲೇಖನ ಪ್ರಸಿದ್ಧವಾಗಿದೆ. ಅದನ್ನು ನೋಡಿದ್ದರೆ ಗೊತ್ತಾಗುತ್ತಿತ್ತು. 'ಮಹಿಷ ಮಂಡಲ' ಎಂಬುದೇ ಮೈನೂರು ಎಂದು ಒಪ್ಪುವುದಾದರೂ ಮೈನೂರಿನ ಕೆಲವು ಪ್ರದೇಶಗಳು, ಅಥವಾ ಒಂದು ತಾಲ್ಲೂಕಿನಷ್ಟು ಪ್ರದೇಶವಿತ್ತು ಎಂದು ಹೇಳಬಹುದು. ಅದು ವಿಜಯನಗರದ ಕಟ್ಟಳೆಯೊಳಗೆ ಇತ್ತು. ವಿಜಯನಗರದ ಅರಸರು "ಕರ್ಣಾಟಕ ರತ್ನ ಸಿಂಹಾಸನಾಧೀಶ್ವರ" ಎಂಬ ಹೆಸರನ್ನು ಪಡೆದಿದ್ದರು. ಅದೇ ಹೆಸರು ಮೈನೂರು ನಂಸ್ಥಾನಾಧೀಶರಿಗೂ ಬಂತು. ಇಂದಲ್ಲ ನಾಳೆ ನಮ್ಮ ರಾಜ್ಯ ಇಡಿಯ ಕರ್ಣಾಟಕಕ್ಕೆ ವಿಸ್ತರಿಸಲ್ಪಡಬೇಕು ಎನ್ನುವ ಅಪೇಕ್ಷೆಯನ್ನೂ ಅಂದಿನ ಅರಸರು ಮತ್ತು ಪ್ರಜೆಗಳು ಹೊಂದಿದ್ದರು. ಮತ್ತು ಆ ರೀತಿ ಸಂಕಲ್ಪ ಮಾಡಿದ್ದರೆಂದು ಗೊತ್ತಾಗಿದೆ. ಈಗ ದೇವರ ದಯೆಯಿಂದ ಅಂಥ ಸಂಕಲ್ಪ ಈಡೇರಿ ಸಿದ್ಧಿಯನ್ನು ಪಡೆದಿದ್ದೇವೆ. ನಾಡಿನ ಏಕೀಕರಣವಾಗಿದೆ. ಈ ಸಿದ್ಧಿಯನ್ನು ಪಡೆದಿರುವಾಗ ಈ ನಾಡಿಗೆ "ಕರ್ಣಾಟಕ" ಎಂದು ಹೆಸರಿಸಲು ಏಕೆ ವಿಳಂಬ ಮಾಡಬೇಕು?

ಈಗ ವಿರೋಧ ಮಾಡಿದಂಥವರ ಅಭಿಪ್ರಾಯವನ್ನೂ ವಿಚಾರ ಮಾಡಬೇಕು. ವಿರೋಧ ಮಾಡುವವರಲ್ಲಿ ಒಂದು ರೀತಿಯ ಭಯವಿರಬಹುದು. ಕರ್ಣಾಟಕ ಎಂದರೆ ಕನ್ನಡ ದೇಶ ಎಂದು ಆಗುತ್ತದೆ, ಮತ್ತು ಭಾಷಾವಾರು ಅಲ್ಪಸಂಖ್ಯಾತರಿಗೆ ಸ್ಥಾನ ಸಿಕ್ಕುವುದಿಲ್ಲ ಎನ್ನುವ ಭಯವಿರಬಹುದು. ಇದು ನಿರಾಧಾರವಾದ ಭಯವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಕರ್ಣಾಟಕ ಎನ್ನುವುದು ಕೇವಲ ಭಾಷೆಯ ದೃಷ್ಟಿಯಿಂದ ಬಂದದ್ದಲ್ಲ. 'ಕರ್ಣಾಟಕ' ಎನ್ನುವುದಕ್ಕೆ ಭಾಷೆಯೂ ಒಂದು ಕಾರಣ ಅಷ್ಟೆ. 'ಕರ್ಣಾಟಕ' ಎಂಬ ಹೆಸರು ಯಾವ ಯಾವ ಕಾರಣಕ್ಕಾಗಿ ಬಂದಿದೆ ಎಂಬುದನ್ನೂ ಹಿಂದಿನ ಸಲ ನಾನು ಹೇಳಿದ್ದೇನೆ. ಅದನ್ನೇ ಇನ್ನೂ ಒಮ್ಮೆ ಹೇಳುತ್ತೇನೆ. ಕರ್ಣಾಟಕ ಎನ್ನುವುದು 'ಕರುನಾಡು', ಕಮ್ಮಿತ್ತು ನಾಡು' 'ಕಂ ನಾಡು' ಎಂಬುದರಿಂದ ಬಂದದ್ದು ಎಂದು ಹೇಳಿದ್ದೇನೆ. 'ದಿನ್ನೆ ನಾಡು' ಎಂದು ಸಹ ಹೇಳುತ್ತಿದ್ದರು. ಇದರ ಅರ್ಥ ಕೇವಲ ಕನ್ನಡ ಎನ್ನುವುದನ್ನೂ ಒಳಗೊಂಡಿಲ್ಲ. ಆದುದರಿಂದ ಭಾಷಾವಾರು ಅಲ್ಪಸಂಖ್ಯಾತ ಮಿತರಿಗೆ ಏನಾದರೂ ಭಯವಿದ್ದರೆ ಅದನ್ನು ತಗೆದುಹಾಕಬೇಕು. ಅಲ್ಪಸಂಖ್ಯಾತರಿಗೆ ತೊಂದರೆ ಕೊಡಬೇಕೆಂಬ ಉದ್ದೇಶ ನಮಗಿಲ್ಲ. ಮೈನೂರು ಎಂದು ಇದ್ದರೆ ಹೇಗೆ ತೊಂದರೆ ಒರುವುದಿಲ್ಲವೋ ಹಾಗೆಯೇ 'ಕರ್ಣಾಟಕ' ಎಂದು ಬದಲಾಯಿಸಿದರೂ ತೊಂದರೆ ಬರುವುದಿಲ್ಲವೆಂಬ ಭರವಸೆಯನ್ನೂ ಕೊಡುತ್ತೇನೆ. ಆದುದರಿಂದ ಭಾಷಾವಾರು ಅಲ್ಪಸಂಖ್ಯಾತರು ಇದನ್ನು ಪುರಸ್ಕರಿಸಬೇಕು ಎಂದು ಹೇಳುತ್ತೇನೆ.

(ಶ್ರೀ ಎ. ಜೆ. ದೊಡ್ಡಮೇಟಿ)

ಕನ್ನಡಿಗರಾಗಿ ಕರ್ನಾಟಕ ಬೇಡ ಎಂದು ಹೇಳುವವರಲ್ಲಿ ಪ್ರಗತಿಪರ ವಿಚಾರ ಇದ್ದರೆ ಅದರ ಕಾರಣ ಏನೆಂದು ನನಗೆ ಗೊತ್ತಾಗುವುದಿಲ್ಲ. ಇದರ ಕಾರಣ ಏನೇ ಇರಲಿ ವಿಚಾರ ಮಾಡೋಣ. ಮೈಸೂರು ಎನ್ನುವ ಹೆಸರಿಗೆ ಮಾರ್ಕೆಟ್ ಇದೆ ಎಂಬುದು ಒಂದು ದೊಡ್ಡ ಕಾರಣ. ಆ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಅವರು ಏನು ಪ್ರಯತ್ನ ಮಾಡಿದ್ದಾರೆ ಆ ಪ್ರಯತ್ನ ನಡೆಯಲಾರದು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಕೆಲವರು ಮಾತನಾಡುತ್ತಾ, ಕರ್ನಾಟಕ ಎನ್ನುವುದಕ್ಕೆ ತಮಿಳಿನಲ್ಲಿ ಒಂದು ಕೆಟ್ಟ ಅರ್ಥ ವಾಗುತ್ತದೆ ಎಂದು ಹೇಳಿದರು. ಅಷ್ಟು ಗಂಭೀರವಾದ ಹೆಸರಿನ ಹಿಂದೆ ಏನಿದೆ ಎಂಬುದನ್ನು ತಿಳಿದುಕೊಂಡಿಲ್ಲ. ಹಾಗೆ ಹೇಳಿದವರು ಕರ್ನಾಟಕದವರು. ಚಿತ್ರದುರ್ಗ ದೊಳಗೆ ನಾಯಕರ ಇತಿಹಾಸವನ್ನು ತೆಗೆದು ನೋಡಿದರೆ ಕರ್ನಾಟಕ ಎಷ್ಟು ಭಾಗಗಳಲ್ಲಿ ವಿಸ್ತರಿಸಿತ್ತು ಎಂಬುದು ಗೊತ್ತಾಗುತ್ತದೆ. ಶ್ರೀರಾಮ ನಾಯಕರು ಆ ರೀತಿ ವಿತಕ್ಕಮಾತನಾಡಿದರು? ಎಂಬುದು ಗೊತ್ತಾಗುವುದಿಲ್ಲ. ಅವರು ನನಗೆ ಇತಿಹಾಸವನ್ನು ಹೇಳಿ ಕೊಡಬೇಕಾಗಿಲ್ಲ. ಕರ್ನಾಟಕ ಎಂಬುದಕ್ಕೆ ಒಂದು ಗಂಭೀರವಾದ ಅರ್ಥ ಇದೆ. ಯಾರೂ ಸೆಂಟ್ಸ್ ಕಂಡೆಮ್ನೇಷನ್ ಮಾಡುವುದಿಲ್ಲ. ಆ ರೀತಿ ಮಾಡುವುದರಿಂದ ಅದರಲ್ಲಿ ನಾವೆಲ್ಲರೂ ಸೇರುತ್ತೇವೆ. ಕೊನೆಯದಾಗಿ ಹೇಳುವುದಾದರೆ ಕರ್ನಾಟಕ ಎಂಬ ಶಬ್ದದ ಪ್ರಾಧಾನ್ಯತೆ ಆಂದೋಳನಕ್ಕೆ ಬಂದಾಗ ಹೊರಪಡುತ್ತದೆ. ಇದನ್ನು ವಿರೋಧ ಮಾಡತಕ್ಕ ಅಲ್ಪ ಸಂಖ್ಯಾತರ ಸಲುವಾಗಿ ಹೇಳ್ದೆನೆ. ಇದನ್ನು ವಿರೋಧ ಮಾಡತಕ್ಕ ಕನ್ನಡ ಬಾಂಧವರ ಸಲುವಾಗಿ ಸ್ವಲ್ಪ ಹೇಳತಕ್ಕದ್ದು ಇದೆ. ಸ್ವಾಮಿ, ಕನ್ನಡ ಒಂದು ಸಂಸ್ಕೃತಿ ಮತ್ತು ಒಂದು ಭಾಷೆ ಈ ರಾಜ್ಯದೊಳಗೆ ಇರಬೇಕು, ಎಂದು ಅಪೇಕ್ಷೆ ಮಾಡುತ್ತೇನೆ. ಆ ರೀತಿ ಅಪೇಕ್ಷೆ ಮಾಡುವುದು ನಿಶ್ಚಯ ಆಗಬೇಕಾದರೆ ಈ ನಿರ್ಣಯಕ್ಕೆ ಒಪ್ಪಿಗೆ ಕೊಡಬೇಕು. ಕರ್ನಾಟಕ ಎಂಬ ಹೆಸರನ್ನು ಅಳಿಸಿದರೆ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕನ್ನಡ ಭಾಷೆ ಎಂಬುದು ಇತ್ತು ಎಂಬ ವಿಷಯ ಮುಂದಿನ ಜನಾಂಗದವರಿಗೆ ಮರೆತುಹೋಗಿ ತಾಳೆಗರಿ, ಅಥವಾ ಇತರ ಪುಸ್ತಕಗಳಿಂದ ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ವಿವೇಚನಾ ದೃಷ್ಟಿಯಿಂದ ವಿಚಾರ ಮಾಡ ಬೇಕು. ನಾವು ಕೇವಲ ಒಂದು ರಾಜ್ಯವನ್ನು ಕಟ್ಟುವ ಮನೋವ್ಯತ್ತಿಯಿಂದ ವಿಚಾರ ಮಾಡುತ್ತಿದ್ದೇವೆ. 100 ವರ್ಷಗಳ ಅನಂತರ ಯಾವುದೋ ವ್ಯಕ್ತಿಗಳ ಪ್ರಭಾವದಿಂದ ಸಾಧಿಸಿದ್ದನ್ನು ಇಂಥಾ ಸಮಯ ಬಂದಾಗ ಕಳೆದುಕೊಂಡರೆ ನಾಳೆ ನಮ್ಮ ಮಕ್ಕಳು ನಮಗೆ ಶಾಪ ಕೊಡಬಹುದು, ಎನ್ನುವುದನ್ನು ವಿಚಾರಮಾಡಬೇಕು. ಈ ದೃಷ್ಟಿಯಿಂದ ನಾವು ಇದರ ಕಡೆ ಲಕ್ಷ್ಯ ಕೊಡಬೇಕಾಗಿದೆ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಮಕ್ಕಳು ಮುಂದೆ ಇದು ಕನ್ನಡ ನಾಡಾಗಿದ್ದರೂ ಏಕಕ್ಕೆ ಇದನ್ನು ಕರ್ನಾಟಕ ಎಂಬ ಹೆಸರಿನಿಂದ ಕರೆಯಲಲ್ಲ ಎಂಬ ಸಂಶಯ ಅವರಿಗೆ ಬರಬಾರದು. ಈ ದೇಶ ಆದದ್ದು ಒಂದು ಸಂಕೋಷದ ವಿಷಯ. ಮೈಸೂರು ಎಂದು ಆಗಿರುವುದಕ್ಕೆ ನಿಜವಾಗಿಯೂ, ಹೆಮ್ಮೆಪಡುತ್ತೇನೆ. ಅದಕ್ಕೆ ಕಾರಣವೇನೆಂದರೆ ಮೈಸೂರು ಎನ್ನುವುದು ಅಸ್ತಿತ್ವದಲ್ಲಿ ಇಲ್ಲದೆ ಇದ್ದರೆ ಕರ್ನಾಟಕ ಇವೊತ್ತು ರಚನೆಯಾಗುತ್ತಿರಲಿಲ್ಲ. ತತ್‌ಪರಿಣಾಮವಾಗಿ ಕನ್ನಡ ಮಾತನಾಡುವ ಜನರು ಒಂದು ಕಡೆ ಸೇರಿ ಈ ಭವ್ಯವಾದ ವಿಧಾನ ಸಭೆಯಲ್ಲಿ ಕುಳಿತು ಮಾತನಾಡುತ್ತಿದ್ದೇವೆ. ಮೊದಲು ಕರ್ನಾಟಕ ಎಂದು ಹೆಸರಿಡಬೇಕೆಂದು ಪ್ರಾಂತ ಪುನರ್ ವಿಂಗಡಣಾಕಾಲಕ್ಕೆ ಡಿಕ್ಲೇರ್ ಮಾಡಿದರು. ಕೊನೆ ಕೊನೆಗೆ ಪಾರ್ಲಿಮೆಂಟಿನಲ್ಲಿ ಬದಲಾವಣೆ ಆಯಿತು. ಪಾರ್ಲಿಮೆಂಟಿನಲ್ಲಿ ಬದಲಾವಣೆ ನಿಶ್ಚಿತವಾಗಿಯೂ, ಅವಸರದಲ್ಲಿ ಆದದ್ದು ಇದನ್ನು ಸಿಂಹಾವಲೋಕನ ಮಾಡಿದರೆ ಕರ್ನಾಟಕ ಎಂದು ಇಡುವುದು ನಿಜವಾಗಿಯೂ ನಮ್ಮೆಲ್ಲರಿಗೂ ಸ್ಫೂರ್ತಿಯನ್ನು ಉಂಟುಮಾಡುತ್ತದೆ. ಮನಸ್ಸಿನ ಏಕೀಕರಣವನ್ನು ಮುಂದಿನ ಕೆಲಸಕ್ಕೆ ತಳಹದಿ ಹಾಕಲಿಕ್ಕೆ ಅನ್ವಯ ಕೊಡುತ್ತದೆ. ಇದನ್ನು ಕೇವಲ ರಾಜಕೀಯ ದೃಷ್ಟಿಯಿಂದ ವಿಚಾರ ಮಾಡಬಾರದು. ಇದು ರಾಜಕೀಯಕ್ಕಿಂತ ಅಮೋಘವಾದದ್ದು, ಮತ್ತು ಅಮೂಲ್ಯವಾದದ್ದು. ಕೆಲವು ರಾಜಕಾರಣಿಗಳು ಕೂಡಿ ಇಟ್ಟಂಥ ಹೆಸರಲ್ಲ. ಪೂರ್ವದ ಋಷಿಗಳು, ಕೋಲಾರದ ನಂದಿ ಬೆಟ್ಟದಲ್ಲಿದ್ದ ಜೈನ ಮಹರ್ಷಿಗಳು ಈ ನಾಡನ್ನು ಕರ್ನಾಟಕ ಎಂದು ಕರೆದಿದ್ದಾರೆ. ಅರ ನೆಯ ಶತಮಾನಕ್ಕಿಂತ ಮೊದಲಿನಿಂದ ಈ ಹೆಸರು ಇದೆ. ನನ್ನ ಸ್ನೇಹಿತರೊಬ್ಬರು ತಮಿಳು ನಾಡಿನ ಆರ್ಕಾಟ್ ಮುಂತಾದ ಪ್ರದೇಶಗಳು ಸೇರಿ ಕರ್ನಾಟಕ ಆಯಿತು ಎಂದು ಹೇಳಿದ್ದಾರೆ. ಅವರೂ ಸಹ ಕರ್ನಾಟಕ ಎಂದು. ಇಟ್ಟುಕೊಂಡರೆ ನನ್ನ ಆಕ್ಷೇಪಣೆಯಿಲ್ಲ. ಅವರು ಹಾಗೆ ಮಾಡಲಾರರು. ಕರ್ನಾಟಕ ಪ್ರದೇಶ ಈಗ ಅಷ್ಟು ವಿಸ್ತಾರವಾಗಿಲ್ಲ. ಕಾವೇರಿಯಿಂದ ಗೋದಾವರಿವರೆಗೆ ಇದ್ದ ಪ್ರದೇಶವೆಲ್ಲಾ ಕರ್ನಾಟಕಕ್ಕೆ ಸೇರಿತು. ಕರ್ನಾಟಕಕ್ಕೆ 3-4 ಲಕ್ಷ ಜನ ಹೊರಗಿನಿಂದ ಬರತಕ್ಕವರು ಇದ್ದಾರೆ. ಅವರಿಗೆ ಸ್ಫೂರ್ತಿ ಕೊಡಬೇಕು. ಅವರು ಕರ್ನಾಟಕಕ್ಕೆ ಬರುತ್ತೇವೆಂದು ಚಳುವಳಿ ಮಾಡುತ್ತಿದ್ದಾರೆ.

ಹೊರಗಿನಿಂದ ಬರುವವರಿಗೆ ಸಹಕಾರ ನೀಡಬೇಕು. ಈ ಪ್ರಶ್ನೆಯನ್ನು ಯೋಗ್ಯ ದೃಷ್ಟಿಯಿಂದ ವಿಚಾರ ಮಾಡುವುದು ಅವಶ್ಯಕ. ನಾನು ಅದನ್ನು ಸಾವಿರಾರು ಉದಾಹರಣೆಗಳಿಂದ ಸ್ಪಷ್ಟೀಕರಿಸಬಲ್ಲೆ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಆಳರನರು ಇಟ್ಟಂಥ ಹೆಸರು ಇದು. ಮೈಸೂರು ಎನ್ನುವ ಭೂ ಪ್ರದೇಶ ಕರ್ನಾಟಕದ ಒಂದು ಅಂಗ. ಕರ್ನಾಟಕ ರಾಜ್ಯ ಹಿಂದೆ ಇತ್ತು ಎಂದು ನನ್ನ ಅನೇಕ ಸ್ನೇಹಿತರು ಹೇಳಿದರು. ಯಾವುದೇ ಒಂದು ರಾಜ್ಯ ಈ ರೀತಿ ಹೆಸರನ್ನು ಹೊಂದಿಲ್ಲ. ಕರ್ನಾಟಕ ಎಂಬ ರಾಜ್ಯ ಭೂ ಪ್ರದೇಶದಲ್ಲಿ ಇಲ್ಲ. ಎಂದು ಹೇಳುವುದಕ್ಕಾಗುವುದಿಲ್ಲ. ಈ ಮಾತನ್ನು ಎರಡು ಸಾವಿರ ವರ್ಷಗಳ ಇತಿಹಾಸದಿಂದ ತೋರಿಸಬಹುದು. ತತ್ಪೂರ್ವದಲ್ಲಿ ಇದು ಪುರಾಣದ ಮಾತು. ಅದನ್ನೆಲ್ಲಾ ನೋಡಿದರೆ ಭಾರತ ಎನ್ನುವ ಹೆಸರು ಎಂಥಾದ್ದು. ಇಡಿಯ ಭರತಖಂಡದ ಸಂಸ್ಕೃತಿಯ ಅರಿವುಂಟಾಗುತ್ತದೆ; ಇದರಿಂದ ನಮ್ಮೆಲ್ಲರಿಗೂ ಸ್ಫೂರ್ತಿದೊರೆಯುತ್ತದೆ ಎಂಬ ಉದಾತ್ತ ಭಾವನೆಯಿಂದಲೇ, ನಮ್ಮ ದೇಶಕ್ಕೆ ಭಾರತ ಎಂಬ ಹೆಸರನ್ನು ಇಟ್ಟುಕೊಂಡಿದ್ದೇವೆ. ಆ ದೃಷ್ಟಿಯಿಂದ ಬ್ರಿಟೀಷರಲ್ಲೂ ಭಾರತ ಎಂದರೆ ಒಂದು ಗೌರವ ಇದೆ. ಅನೇಕ ಕಾರಣಗಳಿಂದ ವಿಚಾರ ಮಾಡಿ ನೋಡಿದರೆ ಈ ನಿರ್ಣಯ ವಿರೋಧಿಸಬಹುದಾದವರ ಮಾತಿನಲ್ಲಿ ನಿಜವಾಗಿ ಸಂತ್ಯಾಂಶವಿದೆ ಎಂಬುದು ನನಗೆ ಕಂಡು ಬರಲಿಲ್ಲ. ಮೈಸೂರು ಎನ್ನುವ ಭೂ ಪ್ರದೇಶ ಕರ್ನಾಟಕದ ಭಾಗವೋ ಅಲ್ಲವೋ, ಕರ್ನಾಟಕದ ಭಾಗ ಎಂದು ಸಿದ್ಧವಾಗಿದ್ದರೆ ಮಾಡಿ; ಇಲ್ಲವಾದರೆ ಬೇಡಿ. ದೈವ ವಶಾತ್ ಏಕೀಕರಣ ಆಗಿದೆ. ಆದ್ದರಿಂದ ಈ ಭಾಗಕ್ಕೆ

ಕರ್ನಾಟಕ ಎಂದು ಹೆಸರು ಬರುವುದು ಅವಶ್ಯಕ. ಈಗ ಇದಕ್ಕೆ ಕೆಲವರು ವಿರೋಧ ಮಾಡುತ್ತಿದ್ದಾರೆ. ಅದಕ್ಕೇನೂ ಕಾರಣವಿಲ್ಲ. ಈ ಪ್ರಶ್ನೆಯ ಕಡೆ ಒಳ್ಳೆಯ ದೃಢ ಮನಸ್ಸಿನಿಂದ ಎಲ್ಲರೂ ತಮ್ಮ ಒಮ್ಮತ ಕೊಟ್ಟು ಈ ನಿರ್ಣಯ ಪಾಸಾಗಿ ಬರುವುದಕ್ಕೆ ಈಗಿರ ತಕ್ಕ ಎಲ್ಲಾ ಅಂಶಗಳನ್ನು ಗಮನಿಸಬೇಕೆಂದು ಹೇಳುತ್ತೇನೆ.

11-30 A.M.

ನನ್ನ ಸ್ನೇಹಿತರಾದ ಶ್ರೀ ಮಾರ್ಕ ಆರ್ಯಂಗಂ ಅವರು ಇಲ್ಲಿಗೆ ಬಂದ ಲಾಗಾಯಿತು ಒಳ್ಳೆಯ ಪ್ರಗತಿಪರ ಮನೋವೃತ್ತಿಯುಳ್ಳವರಾಗಿದ್ದಾರೆ. ಅವರು ಈ ನಿರ್ಣಯವನ್ನು ಯಾವ ರೀತಿ ವಿಚಾರ ಮಾಡುತ್ತಾರೋ ಅದು ನನಗೆ ಗೊತ್ತಿಲ್ಲ. ಆ ದೃಷ್ಟಿಯಿಂದ ನೋಡಿದರೆ ನಿಜವಾಗಿ ಅವರೂ ಈ ನಿರ್ಣಯವನ್ನು ಒಪ್ಪಿದ್ದಾರೆಂದು ನಾನು ತಿಳಿಯುತ್ತೇನೆ. ಮೈಸೂರು ಎಂಬುದು ಪ್ರತಿಗಾಮಿಯೋ, ಕರ್ನಾಟಕ ಎಂಬುದು ಪ್ರತಿಗಾಮಿಯೋ ಎಂಬುದನ್ನು ವಿಚಾರ ಮಾಡಿದರೆ ರಾಜ್ಯಾಂಗದ ಕಾನೂನುಗಳ ಪ್ರಕಾರ ಅನೇಕ ಕಾಯಿದೆಗಳು ಏಕರೂಪವಾಗಿ ಜಾರಿಗೆ ಬರುತ್ತಿರುವುದರಿಂದ, ಮುಕ್ತ ಮನಸ್ಸಿನಿಂದ ಕರ್ನಾಟಕವೆಂಬ ಹೆಸರು ಪ್ರಗತಿಪರವಾದುದೆಂದು ಹೇಳಬಹುದು. ರಾಜಕೀಯ ಭೀತಿಯನ್ನು ಬಿಟ್ಟು ಇದನ್ನು ವಿಚಾರ ಮಾಡಬೇಕು. ಬಿಚ್ಚುಮನಸ್ಸಿನಿಂದ ವಿಚಾರ ಮಾಡಬೇಕು. ಕರ್ನಾಟಕವೆಂಬ ಹೆಸರಿನ ನಿರ್ಣಯ ಇನ್ನು 3-4 ತಿಂಗಳೊಳಗೆ ಈ ಸಭೆಯಲ್ಲಿ ಪಾಸಾಗಬೇಕು. ಈಗಾಗಲೇ ಈ ಆ ನಿರ್ಣಯವನ್ನು ಪಾಸ್ ಮಾಡಬೇಕಾಗಿತ್ತು. ಆದರೆ ಈ ಚರ್ಚೆ ಮುಂದೆ ಹೋಗುವುದಕ್ಕೆ ನನ್ನ ಅಭ್ಯಂತರವಿಲ್ಲ. ಕೊನೆಯದಾಗಿ ನಾನು ಸ್ಪಷ್ಟವಾದ ಒಂದು ಮಾತನ್ನು ಹೇಳುತ್ತೇನೆ. ಮುಂದಿನ ಬಜೆಟ್ ಅಧಿವೇಶನ ದೊಳಗೆ ನಮ್ಮ ಈ ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಇಡದೇ ಇನ್ನೂ ಮುಂದೆ ಹೋದರೆ ಜನದಿಂದ ಕಡಕು ಜಾಸ್ತಿಯಾಗುತ್ತದೆ, ಸರ್ಕಾರ ತಪ್ಪು ಮಾಡಿದಂತಾಗುತ್ತದೆ. ಆಗ ಈ ಸಭೆ ಸರ್ವಾಧಿಕಾರವನ್ನು ತರುವುದಕ್ಕೆ ಅಪೇಕ್ಷೆ ಮಾಡುತ್ತದೆ. ಈ ನಿರ್ಣಯದ ವಿಷಯದಲ್ಲಿ ತೀವ್ರತೆ ಇರುವವರು ಬಹಳ ಜನರು ಇದ್ದಾರೆ. ಈ ಬಗ್ಗೆ ಸುಮ್ಮನೆ ಏನೋ ಒಂದು ವಿರೋಧಣೆ ಇದೆ. ನನಗಿಂತಲೂ ತಿಳಿದವರೂ ಹೆಚ್ಚು ಮಂದಿ ಇದ್ದಾರೆ. ತೀವ್ರತೆಯನ್ನು ಈ ರೀತಿ ನಾವು ಹಿಂದೆಯೇ ವ್ಯಕ್ತ ಮಾಡಿದ್ದರೆ, ಈ ನಿರ್ಣಯವನ್ನು ಈ ಸಭೆಯಲ್ಲಿ ಹಿಂದೆಯೇ ತಂದಿದ್ದರೆ, ಈ ಮೂರು ವರ್ಷಗಳ ಕೆಳಗೇ ನಮ್ಮ ಈ ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕವೆಂಬ ಹೆಸರನ್ನು ತರಬಹುದಾಗಿತ್ತು. ಈ ಹೆಸರು ಬರಬೇಕು ಎನ್ನುವುದರ ಜೊತೆಗೆ ಈ ಬಗ್ಗೆ ಕೆಲವರು ವಿರೋಧ ಮಾಡುವವರ ಮನಸ್ಸು ಕೆಡಬಾರದು. ಅಂತಹವರನ್ನು ನಮ್ಮ ಹತ್ತಿರಕ್ಕೆ ಕರೆತರಬೇಕು. ನಮ್ಮ ಅಭಿಪ್ರಾಯಕ್ಕೆ ನಮ್ಮ ತಿನುವ ರೀತಿನಿಲ್ಲಿ ಅವರ ಮನಸ್ಸನ್ನು ಮೃದು ಮಾಡಬೇಕು. ಈ ಮಧ್ಯೇ ಏನೋ ಒಂದು ತಪ್ಪು ಮಾಡಿದ್ದೇವೆ ಎಂಬ ಭಾವನೆ ಅವರಲ್ಲಿ ಮೂಡಬಾರದು ಎಂದು ನನ್ನ ಅಪೇಕ್ಷೆ. ಈಗಾಗಲೇ ಸಾಕಷ್ಟು ಕಾಲ ವಾಗಿದೆ. ವಿಶಾಲ ಮೈಸೂರು ರಾಜ್ಯವಾಗಿ ಮೂರು ವರ್ಷಗಳಾಗಿವೆ. ಇನ್ನೂ ಹೆಚ್ಚು ವರ್ಷಗಳ ಕಾಲ ಈ ಪ್ರಶ್ನೆಯನ್ನು ಬಗೆ ಹರಿಸದೆ ಮುಂದುವರಿಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಅದಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ಮಗು ಜನನವಾದ 10-11 ದಿವಸಗಳ ಮೇಲೆಯೇ ಏನಾದರೊಂದು ಹೆಸರಿಡುತ್ತಾರೆ. ಅದು ವಾಡಿಕೆ. -4 ವರ್ಷಗಳಾದ ಮೇಲೆ ಹೆಸರಿಡುವುದು ಅಷ್ಟಾಗಿ ಸರಿಯಾದುದಲ್ಲ. ಈಗ ನಾವೂ, ನೀವೂ ಕೂಡಿದ್ದೇವೆ. ಹಿಂದೆ ಯಾವಾಗಲೋ ಮೈಸೂರು ಎಂದು ಹೆಸರಿತ್ತು. ಅದನ್ನೇ ನಾವೆಲ್ಲರೂ ಇದು ವರೆಗೂ ಕರೆಯುತ್ತಿದ್ದೇವೆ. ಈಗ ವಿಶಾಲ ಮೈಸೂರು ರಾಜ್ಯವಾದ ಮೇಲೆ ಇನ್ನು ಮುಂದೆ ಕರ್ನಾಟಕವೆಂಬ ಹೆಸರನ್ನಿಡುವುದು ಸೂಕ್ತ. ಯಾವುದಕ್ಕೂ ಮಂತ್ರಿಗಳು ಉತ್ತರ ಕೊಡಬೇಕು. ಈ ಪ್ರಶ್ನೆಯ ಬಗ್ಗೆ ಹೆಚ್ಚುಕಾಲ ತೆಗೆದು ಕೊಳ್ಳುವುದು ಬೇಡ; ಅನಾವಶ್ಯಕ. ದೇಶದ ಇಂತಹ ಪ್ರಶ್ನೆಯನ್ನು ಬಗೆಹರಿಸಬೇಕಾದರೆ ಮೊದಲು ಮನಸ್ಸಿನ ಪರಿವರ್ತನೆಯಾಗಬೇಕು. ಈಗ ಕಾಂಗ್ರೆಸ್ ಪಕ್ಷ, ಪಿ. ಎಸ್. ಪಿ., ಸ್ವತಂತ್ರರೂ ಎಲ್ಲರೂ ಇದಕ್ಕೆ ಒಪ್ಪಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯವರು ಈ ನಿರ್ಣಯ ಸರಿಯಾದುದೆಂದು ಹೇಳಿದ್ದಾರೆ. ಆದುದರಿಂದ ಈ ನಿರ್ಣಯಕ್ಕೆ ಎಲ್ಲರೂ ಒಪ್ಪಿತ ಕೊಟ್ಟಿದ್ದಾರೆಂದಾಯಿತು. ಈ ಬಗ್ಗೆ ಯಾರೂ ವಿರೋಧಿಸಲಾರರು ಎಂದು ನಾನು ತಿಳಿದಿದ್ದೇನೆ.

ಶ್ರೀ ಎಂ. ಸಿ. ನರಸಿಂಹನ್ (ಕೋಲಾರ ಚಿನ್ನದ ಗಣಿ).—ಕಾಂಗ್ರೆಸ್ ಪಕ್ಷ ಮೊದಲೇ ಒಪ್ಪಿದ್ದರೆ ಈ ತೊಂದರೆ ಯಾಗುತ್ತಿರಲಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಮೈಸೂರು ಕಾಂಗ್ರೆಸ್ ಕಮಿಟಿ ಅಭಿಪ್ರಾಯ ಬೇರೆ, ಇತರ ಪ್ರದೇಶಗಳ ಕಾಂಗ್ರೆಸ್ ಕಮಿಟಿ ಅಭಿಪ್ರಾಯ ಬೇರೆ ಎಂಬ ಪ್ರಶ್ನೆಯನ್ನು ತಾವು ಸರಿಯಾಗಿ ತಿಳಿದುಕೊಳ್ಳಬೇಕು;

Sri B. D. JATTI (Chief Minister).—He will explain in detail. Have patience. ಆ ಮಾನ್ಯ ಸದಸ್ಯರಿಗೆ ಸರಿಯಾಗಿ ಅದನ್ನು ಎಕ್ಸ್‌ಪ್ಲೇನ್ ಮಾಡಿದರೆ ಗೊತ್ತಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಪ್ರಶ್ನೆಯ ಬಗ್ಗೆ ಯಾರಿಗೂ ವಿರೋಧವಿಲ್ಲ. ಆದರೂ ಈ ಪ್ರಶ್ನೆ ಬಗೆಹರಿಸುವುದು ನಿಧಾನವಾಗಿದೆ. ಇದು ಬಹಳ ಆಶ್ಚರ್ಯಪಡಬೇಕಾದ ಸಂಗತಿ.

ಶ್ರೀ ಎಂ. ರಾಮಪ್ಪ (ಹರಿಹರ).—ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿ ಈ ವಿಷಯದಲ್ಲಿ ಈಗಾಗಲೇ ಒಂದು ನಿರ್ಣಯವನ್ನು ತೆಗೆದು ಕೊಂಡಿದೆ.

ಶ್ರೀ ಬಿ. ಡಿ. ಜತ್ತಿ.—ಕಾಂಗ್ರೆಸ್ ಪಕ್ಷ ಏನು ನಿರ್ಣಯ ಮಾಡಬೇಕೋ ಅದನ್ನು ಮಾಡಿದೆ. ಆದರೆ ಆ ನಿರ್ಣಯವನ್ನು ಜಾರಿ ಮಾಡುವಾಗ ಒಂದು ಕೊನೆ ಮಾತು. ಆ ಪಕ್ಷಕ್ಕೆ ತೊಂದರೆಯಾದರೆ ಮೂರನೆಯವರಿಗೆ ಆ ವಿಷಯದಲ್ಲಿ ವ್ಯತಿರಿಕ್ತವಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಪ್ರಶ್ನೆಯನ್ನು ದೇಶದ ದೃಷ್ಟಿಯಿಂದ ವಿಚಾರ ಮಾಡಬೇಕೆಂಬುದು ಹೇಳತಕ್ಕ ಕಾಂಗ್ರೆಸ್ಸಿನವರು ಕೆಲವರು ಇದ್ದಾರೆ. ಈ ನಿರ್ಣಯಕ್ಕೆ ಜೆಂಬಲ ಕೊಡಬಾರದು ಎಂದು ಹೇಳತಕ್ಕವರೂ ಇದ್ದಾರೆ. ಒಟ್ಟಿನಲ್ಲಿ ಅಂತಹವರ ಮನಸ್ಸನ್ನು ಸ್ವಲ್ಪ ಮೃದು ಮಾಡಿ ಅವರಿಗೆ ಈ ನಿರ್ಣಯದ ಮಹತ್ವ ಜೆನ್ನಾಗಿ ಅರಿವಾಗಲಿ ಎಂದು ಇಲ್ಲಿ ಈ ನಿರ್ಣಯವನ್ನು ಇಟ್ಟಿದ್ದಾರೆ. ಮುಖ್ಯವಾಗಿ ಈ ನಿರ್ಣಯಕ್ಕೆ ಯಾವ ತರಹದ ವಿರೋಧವೂ ಹೆಚ್ಚಿಗೆ ಬಂದಿಲ್ಲವೆಂದು ನಾನು ತಿಳಿದಿದ್ದೇನೆ. ಹಿಂದಿನ ಸಲ ಈ ನಿರ್ಣಯ ಚರ್ಚೆಯಾದಾಗ ಹಳೆಯ ಮೈಸೂರಿನ 30 ಜನ ವಿರೋಧ ಪಕ್ಷದ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ 20 ಜನ ಸದಸ್ಯರು ಒಪ್ಪಿಗೆ ಕಳುಹಿಸಬೇಕಾದರೆ, ಈ ಸಭೆಯಲ್ಲಿ ಮುಂದೆ ಅದು ಇನ್ನೊಂದು ಸಾರಿ

(ಶ್ರೀ ಎ. ಜೆ. ದೊಡ್ಡಮೇಟಿ)

ಚರ್ಚೆ ಬಂದಾಗ ತಮ್ಮ ಒಪ್ಪಿಗೆಯನ್ನು ಕೊಡುತ್ತೇವೆಂದು ಪಾಗ್ವಾನಮಾಡಿ ಹೇಳಿದ್ದಾರೆ. ದಕ್ಷಿಣ ಕರ್ನಾಟಕದಿಂದ ಬಂದ ಕೆಲವು ಸದಸ್ಯರೂ ಸಹ ತಮ್ಮ ಒಪ್ಪಿಗೆಯನ್ನು ಈ ನಿರ್ಣಯಕ್ಕೆ ಮುಂದೆ ಕೊಡುತ್ತೇವೆಂದು ಈ ಸಭೆಯಲ್ಲಿ ಹಿಂದೆ ಭಾಷಣ ಮಾಡಿದ್ದಾರೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಕುಂದಾಪುರ).—ಮುಖ್ಯ ಮಂತ್ರಿಗಳು ಏನು ಹೇಳಿದರು ?

ಶ್ರೀ ಎ. ಜೆ. ದೊಡ್ಡಮೇಟಿ.—ಅವರು ಆಗ ಇಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರ ಜಮಖಂಡಿ ಕ್ಷೇತ್ರವನ್ನು ಬಿಟ್ಟು ಕೊಟ್ಟಿದ್ದು ಕರ್ನಾಟಕ ಸಂಸ್ಥಾನ ಆಗುವುದಕ್ಕಾಗಿಯೇ. ಹೀಗಿರುವಾಗ ಮುಖ್ಯ ಮಂತ್ರಿಗಳ ಅಭಿಪ್ರಾಯವೇನಿದೆ ಎಂದು ಕೇಳಿದರೆ ಹೇಗೆ ?

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಅದನ್ನು ಕೇಳೋಣ. ಏಕೆ ನುಮ್ಮನೆ ಈ ಚರ್ಚೆ !

Sri B. D. JATTI.—The question is very important for all of us. Members should understand both the sides correctly and that is why we should discuss it fully before we come to a decision.

Sri M. C. NARASIMHAN.—There are no two sides to this question. Perhaps Sri Channa Basappa may be opposed to it.

ಶ್ರೀ ಎ. ಜೆ. ದೊಡ್ಡಮೇಟಿ.—ಅದು ನನಗೆ ಗೊತ್ತಿಲ್ಲ. ಇತರರೂ ಮಾತನಾಡಿದ್ದಾರೆ. ಶ್ರೀಮಾನ್ ದೀನದಯಾಳು ನಾಯ್ಡು ಏನು ಮಾತನಾಡಿದ್ದಾರೋ ಅದೂ ಗೊತ್ತಿಲ್ಲ.

Sri V. P. DEENADAYALU NAIDU (Cubbonpet).—I am always sitting by his side to oppose.

Sri A. J. DODDAMETI.—He is opposing in all seriousness.

ಆದರೆ ಈ ನಿರ್ಣಯವನ್ನು ರಾಜಕೀಯ ದೃಷ್ಟಿಯಿಂದ ವಿಚಾರಮಾಡುವುದು ಬೇಡ. ಯಾರನ್ನೂ ಈ ಬಗ್ಗೆ ಎತ್ತಿಕಟ್ಟಬಾರದು. ಈ ನಿರ್ಣಯದ ಮೆರಿಟ್ ಮೇಲೆ ಇದನ್ನು ಇಲ್ಲಿ ಒಂದು ಘನತೆಯಿರಿದ ಚರ್ಚೆಮಾಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಈಗ ಕರ್ನಾಟಕವೆಂದು ಹೇಳತಕ್ಕವರು ಕನ್ನಡಿಗರೇ. ಹಿಂದೆ ವಿಜಯನಗರವೆಂದು ಇರಲಿ ಎಂದು ಹೇಳಿದವರು ಕನ್ನಡಿಗರೇ ಹಿಂದಿನ ತೆಲುಗರು ಕೆಲವರು ಈಗ ಕನ್ನಡಿಗರಾಗಿದ್ದಾರೆ. ಕನ್ನಡಿಗರು ಕೆಲವರು ಈಗ ತೆಲುಗರು ಸಹ ಆಗಿದ್ದಾರೆ. ಕರ್ನಾಟಕ ರಾಜ್ಯಸ್ಥಾಪನೆ ನಮ್ಮ ಭಾರತ ದೃಷ್ಟಿಯಿಂದ ಆಗಬೇಕು. ಕನ್ನಡ ಭಾಷೆಗೆ ಉತ್ತೇಜನ ಹೆಚ್ಚಬೇಕು. ಕನ್ನಡ ಭಾಷೆಗೆ ಪ್ರೋತ್ಸಾಹ ಕೊಡಬೇಕು ಎನ್ನುವುದು ಬಹುಶಃ ಪುಸ್ತಕದಲ್ಲಿದೆಯಲ್ಲಾ ಎಂಬ ಪರಿಸ್ಥಿತಿಯಾಗಕೂಡದು. ಈಗ ಬೆಂಗಳೂರು ನಗರದಲ್ಲಿನ ಸ್ಥಿತಿಯನ್ನು ನಾನು ನೋಡಿದ್ದೇನೆ. ಇಲ್ಲಿ ಕನ್ನಡಭಾಷೆ ಯಾವ ರೀತಿ ಕುಸಿದುಬೀಳುತ್ತಿದೆ ಎಂಬುದು ನನಗೆ ಗೊತ್ತಿದೆ. ಕೆಲವರು ಮಾತ್ರ ಇದಕ್ಕೆ ವಿರೋಧ ಮಾಡುವಾಗ ಅಂತಹವರ ಮನಸ್ಸನ್ನು ಮೃದುಮಾಡಿ ಅವರ ಅಭಿಪ್ರಾಯವನ್ನು ಬದಲಾಯಿಸಬೇಕು. ಆದರೆ ಬಹಳ ಅವಸರವಾಗಿ ಇದನ್ನು ಚರ್ಚೆಮಾಡಿ ಈ ನಿರ್ಣಯವನ್ನು ತೆಗೆದು ಕೊಳ್ಳಬೇಕು ಎಂಬುದಾಗಿ ನಾನು ಹೇಳಲಿಲ್ಲ. ಈಗಾಗಲೇ ಕಾಲ ಸಾಕಷ್ಟು ಆಗಿದೆ. ಈ ಒಗ್ಗೆ ಚರ್ಚೆ ಹಿಂದೆ ಸ್ವಲ್ಪಮಟ್ಟಿಗೆ ಆಗಿದ್ದರೂ ಮೊನ್ನೆ ಈ ಬಗ್ಗೆ ವಿರೋಧ ಮಾಡಿರುವವರು ಸಾಕಷ್ಟು ಅವಕಾಶವನ್ನು ತೆಗೆದುಕೊಂಡು ನ್ಯಾಯದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇನ್ನೂ ಹೆಚ್ಚಿನ ಕಾಲ ಚರ್ಚಿಸಿ ಕೊನೆಯ ಪಕ್ಷ ಮುಂದಿನ ಬಜೆಟ್ ಅಧಿವೇಶನದೊಳಗೆ ಈ ಸಭೆ ತನ್ನ ಮತವನ್ನು ಯಾವ ರೀತಿ ವ್ಯಕ್ತಮಾಡುವುದೋ ಆ ರೀತಿ ನಿರ್ಣಯವಾಗಲಿ.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ಅಲ್ಲಿಯವರೆಗೆ !

ಶ್ರೀ ಎ. ಜೆ. ದೊಡ್ಡಮೇಟಿ.—ಅಲ್ಲಿಯವರೆಗೂ ಇದನ್ನು ಚರ್ಚೆಮಾಡಲಿ. ಅಷ್ಟು ಹೊತ್ತಿಗೆ ಒಂದು ತೀರ್ಮಾನಕ್ಕೆ ನಾವು ಬರಬೇಕು. ಇಷ್ಟೊತ್ತು ನೀವು ಆ ರೀತಿಪರೀಕ್ಷೆ ಮಾಡಿದರೆ ನನ್ನ ವಿರೋಧ ಏನೂ ಇಲ್ಲ. ಅನೇಕ ಸಮಸ್ಯೆಗಳನ್ನು ದೂರೀಕರಿಸುವುದಕ್ಕೆ ಸ್ವಲ್ಪ ವೇಳೆ ಆಗುತ್ತದೆಯೆ ಹೊರತು ಅದಕ್ಕಿಂತ ಬೇರೆ ಏನೂ ಇಲ್ಲ. ಕೆಲವರ ಅಪೇಕ್ಷೆಯನ್ನು ನಾವು ಮುರಿಯಬಾರದು ಎಂಬ ಕಾರಣದಿಂದ ನಾವು ಇದನ್ನು ಇನ್ನೂ ದೀರ್ಘವಾಗಿ ವಿಚಾರಮಾಡಿ ನೋಡೋಣ. ಈ ನಿರ್ಣಯಕ್ಕೆ ಸಂಪೂರ್ಣವಾಗಿ ಎಲ್ಲ ಸದಸ್ಯರ ಅನುಗ್ರಹವನ್ನು ಪಡೆಯೋಣ. ನೀವು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಶಿಫಾರ್ಸು ಮಾಡಬೇಕು. ಈ ಶಿಫಾರ್ಸಿಗೆ ಎಷ್ಟು ಬೆಂಬಲ ಕೇಂದ್ರಸರ್ಕಾರದಿಂದ ದೊರಕುತ್ತದೆಯೋ ಅಷ್ಟು ಬೇಗ ಕಾರ್ಯವಾಗುತ್ತದೆ. ಈಗ ನೂರಕ್ಕೆ ನೂರು ಸಿಕ್ಕುವುದು ಕಷ್ಟ. ಆದರೆ ನೂರಕ್ಕೆ ಎಂಬತ್ತೈದು ಸಿಕ್ಕಿದರೆ ಸಾಕು. ಈ ಒಂದು ದೃಷ್ಟಿಯಿಂದಾದರೂ ವಿಚಾರ ಮಾಡಬೇಕು. ಈ ದೃಷ್ಟಿಯಲ್ಲಿ ಪ್ರಾಥಮಿಕವಾಗಿ ಈ ನಿರ್ಣಯ ಪಾಸ್ ಆಗಬೇಕೆಂದು ಕೆಲವರು ಇದ್ದಾರೆ. ಅದಕ್ಕಾಗಿ ಅನೇಕರು ಹೆಚ್ಚಿನ ಬೆಂಬಲವನ್ನು ಕೊಟ್ಟಿದ್ದಾರೆ. ಯಾರು ಈ ನಿರ್ಣಯಕ್ಕೆ ಹೆಚ್ಚಿಗೆ ವಿರೋಧ ಮಾಡುತ್ತಾರೋ ಅವರ ಮನಸ್ಸನ್ನು ಒಲಿಸಬೇಕು. ಹಿಂದಿನ ಕರ್ನಾಟಕದಲ್ಲಿ ಮೂಲನಿವಾಸಿಗಳಾದ ಆದಿಕರ್ನಾಟಕದವರೂ, ದ್ರಾವಿಡರೂ, ಹೊಯ್ಸಳರೂ ಇದ್ದರು. ಆದರೆ ಶ್ರೀಮಾನ್ ಟಿ. ಸುಬ್ರಹ್ಮಣ್ಯರಾದರೋ ಹೊಸ ಕರ್ನಾಟಕದವರು. ಹಳೆಯ ಕರ್ನಾಟಕದವರು ಬೇರೆ ಇದ್ದಾರೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ತಾವು ಇದ್ದೀರಿ.

ಶ್ರೀ ಎ. ಜೆ. ದೊಡ್ಡಮೇಟಿ.—ಮುಖ್ಯವಾಗಿ ಕರ್ನಾಟಕ ಶಬ್ದದ ಮೂಲೋತ್ಪತ್ತಿ ಇದಕ್ಕೆ ಪ್ರೋತ್ಸಾಹ, ಇದರ ಬೆಳವಣಿಗೆ—ಎಲ್ಲಾ ಹಳೆಯ ಮೈಸೂರಿನಲ್ಲಿವೆ. ಆದುದರಿಂದ ಈ ನಿರ್ಣಯವನ್ನು ಪುನರಾಲೋಚನೆ ಮಾಡಬೇಕು. ಯಾರೂ ಭಿನ್ನ ಭೇದಕ್ಕೆ ಹೋಗಕೂಡದು. ಮುಖ್ಯ ಮಂತ್ರಿಗಳು ಈಗ ಉತ್ತರ ಕರ್ನಾಟಕದವರೆಲ್ಲರತಕ್ಕ ಮಂತ್ರಿಗಳು ಈ ವಿಷಯದಲ್ಲಿ ಪ್ರಯತ್ನ ಮಾಡುತ್ತಿರುವುದು ಇನ್ನೂ ಸಾಲದೇ ಎಂದು ಹೇಳಿದರು. ಈಗಿನ ಸಂದರ್ಭದಲ್ಲಿ ಉತ್ತರ ಕರ್ನಾಟಕದವರು ಎಂದು ಉತ್ತರ ಕರ್ನಾಟಕದಲ್ಲಿ ಯಾರು ಹೇಳುತ್ತಾರೆ, ಹಳೆಯ ಮೈಸೂರಿನವರು ದಕ್ಷಿಣ ಕರ್ನಾಟಕದವರು ಎಂದು ಯಾರು ಹೇಳುತ್ತಾರೆ? ಆದುದರಿಂದ ಕೂಡಲೆ ಕರ್ನಾಟಕವೆಂಬ ಒಂದು ಹೆಸರನ್ನು ಮಾತ್ರವಿಡಬೇಕು. ಯಾರಿಗೆ ಆ ಹೆಸರು ಒಪ್ಪಿಗೆಯಾಗುತ್ತದೋ ಅವರು ಇಲ್ಲಿಗೆ ಬರುತ್ತಾರೆ. ಉತ್ತರ ಕರ್ನಾಟಕದವರನ್ನೇ ಈ ಕಾರ್ಯಕ್ಕೆ ಚುನಾವಣೆ ಮಾಡಿದ್ದಾರೆಂದು ಯಾರಾ

ದರೂ ತಿಳಿದಿದ್ದರೆ ಅದು ತಪ್ಪು. ಆ ದೃಷ್ಟಿಯಿಂದ ಏನಾದರೂ ತಾವು ವಿಚಾರ ಮಾಡುತ್ತಿದ್ದರೆ ಅದು ತಪ್ಪು. ಇನ್ನು ಹೆಚ್ಚಿನ ಮಾತುಗಳನ್ನು ನಾನು ವಿಚಾರಮಾಡುವುದಿಲ್ಲ. ಮುಖ್ಯವಾಗಿ ಇದನ್ನು ರಾಜಕೀಯ ದೃಷ್ಟಿಯಿಂದ ವಿಚಾರ ಮಾಡಬಾರದು. ಈಗಿರುವುದಕ್ಕಿಂತ ಹೆಚ್ಚಿಗೆ ಉತ್ತಮ ಸಾಧನೆಗಳಿಂದ ಈ ಪ್ರಶ್ನೆಯನ್ನು ವಿಚಾರ ಮಾಡಬೇಕೆಂದು ಹೇಳಿ ಮತ್ತೊಮ್ಮೆ ಈ ನಿರ್ಣಯಕ್ಕೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಸ್ವಾಮಿ, ಬರಿಯ ಕೆಲವು ನಿಮಿಷಗಳವರೆಗೆ ಮಾತನಾಡಿ ನನ್ನ ಭಾಷಣವನ್ನು ಮುಗಿಸಬೇಕೆಂದಿದ್ದೇನೆ. ಇದು ಬಹಳ ಆಶ್ಚರ್ಯಕರವಾದ ವಿಷಯ. ಇದರ ಮೇಲೆ ಚರ್ಚೆ ನಡೆಯುತ್ತಿದೆ. ನಾನು ಮೈಸೂರಾಗಬೇಕು ಅಥವಾ ಕರ್ಣಾಟಕವಾಗಬೇಕು ಎಂದು ಬಹಳ ಬರುಸಿನಿಂದ ಮಾತನಾಡಬೇಕೆಂದು ಬಂದವನಲ್ಲ. ದಕ್ಷಿಣ ಕನ್ನಡದಲ್ಲಿ ಕನ್ನಡ ಮಾತನಾಡುವ ಜಿಲ್ಲೆಯಲ್ಲಿ ಶೇಕಡ 70 ಅಥವಾ 80ರಷ್ಟು ಜನ ತುಳು ಭಾಷೆಯಲ್ಲಿ ಮಾತನಾಡುತ್ತಾರೆ. ಅವರು ಅಲ್ಲಿ ತುಳುಭಾಷೆಯಾಗಬೇಕೆಂದು ಹೇಳುತ್ತಾರೆ. ಆದರೆ ಇಲ್ಲಿ ಇಂತಹ ಒಂದು ಹೆಸರಿಗಾಗಿ ಹೊಡೆದಾಡುವುದು ಎಷ್ಟರಮಟ್ಟಿಗೆ ನ್ಯಾಯ ಎಂಬುದನ್ನು ಹೇಳಬೇಕು. ಇದು ಒಂದು ದೊಡ್ಡದಾದ ವಿಷಾದದ ವಿಷಯ. ಅಂಥಾದ್ದರಲ್ಲಿ ಶ್ರೀಮಾನ್ ದೊಡ್ಡಮೇಟಿಯವರು ಏತಕ್ಕಾಗಿ ಇಷ್ಟು ಮೆತ್ತಗಾಗಿದ್ದಾರೆ?

ಶ್ರೀ ಎ. ಜೆ. ದೊಡ್ಡಮೇಟಿ.—ಮೆತ್ತಗಾಗಿಲ್ಲ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಮೆತ್ತಗಾಗದಿದ್ದರೆ ಬಹಳ ಸಂತೋಷ. ನೀವಾರು ಮೂರು ವರ್ಷಗಳಿಂದ ಮೈಸೂರು ರಾಜ್ಯ ಏಕಾಏಕಿ ಕರ್ಣಾಟಕ ರಾಜ್ಯವಾಗಬೇಕು ಎಂದು ಹೇಳುತ್ತಿದ್ದವರು ಇದ್ದಕ್ಕಿದ್ದ ಹಾಗೆ ಈಗ ಒಮ್ಮೆ ಬೆಣ್ಣೆಯಾಗಿ ಏಕೆ ಆದರು ಎಂದು ನಾನು ಊಹೆ ಮಾಡುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ನನ್ನ ಅಭಿಪ್ರಾಯ ಊಹೆಗಳಿಂದಾಗಿಲ್ಲ. ನಮ್ಮಿಬ್ಬರ ಪ್ರಶ್ನೆಯಲ್ಲ ಇದು. ದೇಶದ ಪ್ರಶ್ನೆ. ನಾನು ನಿಶ್ಚಯವಾಗಿ ಇರತಕ್ಕ ರೀತಿಯನ್ನು ಹೇಳುತ್ತಿದ್ದೇನೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ನನ್ನ ಅಭಿಪ್ರಾಯ ಸ್ವಲ್ಪ ತಪ್ಪಾಗಿರಬಹುದು. ನನಗೇನು ಅನ್ನಿಸಿತು ಎಂದರೆ ಸುಮ್ಮನೆ ಕೂಗಾಡಬೇಡಿ. ಮತ್ತೆ ಈ ಬಗ್ಗೆ ವಿರೋಧ ವಿರುವವರನ್ನು ನಿಮ್ಮ ಕಡೆ ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ನಾನು ಹೇಳುತ್ತೇನೆ. ಇನ್ನು ಎರಡು ವರ್ಷಗಳಲ್ಲಿ ಜನರಲ್ ಎಲೆಕ್ಷನ್ ಇದೆ. ಆಗ ಕಾಂಗ್ರೆಸ್ ಸರ್ಕಾರವೇ ಇರುತ್ತದೋ ಅಥವಾ ಬೇರೆ ಸರ್ಕಾರವಿರುತ್ತದೋ ಎಂಬುದನ್ನು ಸ್ವಲ್ಪ ದಿವಸಗಳು ಕಾದುನೋಡೋಣ ಎಂದು ನಾನೆಂದುಕೊಂಡೆ. 1962ನೆಯ ಇಸವಿಯಲ್ಲಿ ಯಾವ ಸರ್ಕಾರ ಬರುತ್ತದೋ ಅದನ್ನು ನೋಡೋಣ.

ಶ್ರೀ ಎ. ಜೆ. ದೊಡ್ಡಮೇಟಿ.—ಮುಂದಿನ ಅಧಿವೇಶನ ದೊಳಗೆ ಮೈಸೂರಿಗೆ ಕರ್ಣಾಟಕವೆಂಬ ಹೆಸರನ್ನು ಇಡಬೇಕೆಂದು ನನ್ನ ಕೊನೆಯ ಮಾತು.

†ಶ್ರೀ ವಿ. ಶ್ರೀನಿವಾಸಶೆಟ್ಟಿ.—ಯಾರದು ಕೊನೆಯಾಗುತ್ತದೆ, ಯಾರದು ಏನಾಗುತ್ತದೆ ಎಂದು ಹೇಳುವುದು ಬಹಳ ಕಷ್ಟಕರವಾದ ಸಂಗತಿ. ಏಕೆಂದರೆ ಈಗ ಪಾಮಾಣಿಕತೆ ಎಲ್ಲಿದೆ ಎಂಬ ಪ್ರಶ್ನೆ ಬಂತು. ನಾವು ಇಲ್ಲಜೇ ಇರುವಾಗ ಈ ಅಸೆಂಬ್ಲಿಯಲ್ಲಿ ನೀವೇ ಎಷ್ಟೋ ಸಾರಿ ಎಷ್ಟೋ ತರಾವುಗಳನ್ನು ಓಟಿಗೆ ಹಾಕಿದ್ದೀರಿ. ಆ ರೀತಿ ಇದನ್ನು ಒಂದೆರಡು ದಿವಸಗಳಿರುವಂತೆಯೇ ಏತಕ್ಕೆ ಓಟಿಗೆ ಹಾಕಬಾರದು? ಕರ್ಣಾಟಕ ರಾಜ್ಯವಾಗಬೇಕು ಎನ್ನುವವರಲ್ಲಿ ನಾನೂ ಒಬ್ಬ. ಆ ರೀತಿಯಾದರೆ ಒಳ್ಳೆಯದು. ಬಹುಮತ ಜನರು ಕರ್ಣಾಟಕ ರಾಜ್ಯವಾಗಲೇಬೇಕು ಎಂದು ಹೇಳಿರುವಾಗ ಪ್ರಜಾಪ್ರಭುತ್ವದಲ್ಲಿ ಏಕೆ ಆಗಬಾರದು? ಕೆಲವೇ ಮಂದಿ ಅದಕ್ಕೆ ವಿರೋಧವಾಗಿ ಇರಬಾರದು ಎಂದು ಹೇಳುವವನಲ್ಲಿ ನಾನೂ ಒಬ್ಬ. ಮಾನ್ಯ ಶ್ರೀ ದೊಡ್ಡಮೇಟಿಯವರು ಹೇಳಿದ ಪ್ರಕಾರ ಕಾಂಗ್ರೆಸ್ ಪಕ್ಷದಲ್ಲಿ ಮತ್ತು ವಿರೋಧಪಕ್ಷದಲ್ಲಿ ಬಹುಮತವಿದ್ದಿದ್ದರೆ ಈ ವಿಷಯ ಎಷ್ಟೋಸಾರಿ ತರಾವುರೂಪದಲ್ಲಿ ಇಲ್ಲಿ ಚರ್ಚೆಗೆ ಬಂದಿದ್ದರೂ, ಒಪ್ಪಿಗೆ ಇನ್ನೂ ಏಕೆ ಬರುವುದಿಲ್ಲ, ಸರ್ಕಾರ ಏಕೆ ಅಡ್ಡಿ ಬರುತ್ತದೆ ಎಂಬುದು ನನಗೆ ಆಶ್ಚರ್ಯವಾಗಿದೆ. ಎಲ್ಲರೂ ಸೇರಿ ಓಟಿಗೆ ಹಾಕೋಣ. ಇದು ಒಂದು ನಿರ್ಣಯದ ರೂಪದಲ್ಲಿ ಪಾಸ್ ಆಗಬೇಕೆಂದು ಸರ್ಕಾರ ಏಕೆ ಹೇಳುವುದಿಲ್ಲವೋ ನನಗೆ ಗೊತ್ತಿಲ್ಲ. ಅದು ಮಹತ್ವವಾದಂಥ ಪ್ರಶ್ನೆ. ಕರ್ಣಾಟಕ ರಾಜ್ಯವಾಗಬೇಕು ಎಂಬ ವಿಷಯವನ್ನು ಓಟಿಗೆ ಹಾಕಿದರೆ ಬಹುಮತ ಸಿಕ್ಕೀತು ಎಂದು ಮಾನ್ಯ ಮಂತ್ರಿಗಳಿಗೂ, ಸರ್ಕಾರಕ್ಕೂ ನಮಗೂ ಗೊತ್ತಿದೆ. ಇವೊತ್ತಿಗೆ ಅದರಲ್ಲಿ ಒಂದು ಸ್ಕೋಪಿದೆ. ಓಟಿಗೆ ಹಾಕಿದರೆ ಅದು ಹೇಗೆ ಆಗುತ್ತದೋ ಗೊತ್ತಿಲ್ಲ. ಯಾವಾಗಲೂ ಶ್ರೀಮಾನ್ ದೊಡ್ಡಮೇಟಿಯವರು ಕರ್ಣಾಟಕವಾಗಬೇಕೆಂದು ಹೇಳುತ್ತಿರುವ ಪ್ರಕಾರ ಈ ಸಭೆಯಲ್ಲಿ ಈ ವಿಷಯವನ್ನು ಓಟಿಗೆ ಹಾಕಬೇಕೆಂದು ನಾನು ಹೇಳುತ್ತೇನೆ.

ತಾವು ಸ್ವಾತಂತ್ರ್ಯ ಕೊಟ್ಟಿಲ್ಲ. ಕರ್ಣಾಟಕ ಎಂದೋ, ಅಥವಾ ಮೈಸೂರು ರಾಜ್ಯ ಎಂದೋ ಯಾವ ಹೆಸರನ್ನು ಇಡಬೇಕೆಂದು ಕೇಳಿದರೆ ಬಹುತೇಕವಾಗಿ ಕಾಂಗ್ರೆಸ್ಸಿನವರೆಲ್ಲರೂ ಸೇರಿ ವೋಟು ಮಾಡುವುದಾದರೆ ಈ ನಿರ್ಣಯದ ಬಗ್ಗೆ ಹೆಚ್ಚು ಮಂದಿ ವೋಟನ್ನು ಮಾಡುತ್ತಾರೆ ಎನ್ನುವುದು ನಿಸ್ಸಂಶಯ. ಇದು ಗೊತ್ತಿದ್ದರೂ ನಿಮ್ಮ ಮನಸ್ಸು ಸಾಕಷ್ಟು ಹಿಂದಕ್ಕೆ ಮುಂದಕ್ಕೆ ಹೋಗುತ್ತಿರುವುದರ ಒಳಗುಟ್ಟಾದರೂ ಏನು? ಏಕೆ ಒಪ್ಪಿಗೆ ಕೊಟ್ಟಿಲ್ಲ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. I don't know.

Sri M. C. NARASIMHAN.—Why did Sri Doddameti want to postpone discussion on this resolution till the Budget session? The Hon'ble Chief Minister knows his mind much better. Let him tell us.

Sri B. D. JATTI.—Where is the question of my explaining? When Sri Narasimhan knows my mind very well, and when he knows Sri Doddameti's maind very well, and if he is above of it, why should I explain?

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಸ್ವಾಮಿ, ಏಕೆಂದರೆ ಇವೊತ್ತಿನ ದಿನ ಇಂತಹ ವಿಷಯದ ಚರ್ಚೆಯನ್ನು ಮುಂದೂಡುವುದಕ್ಕೆ ಅವಕಾಶ ಕೊಡಬಾರದು. ಮಾನ್ಯ ಮಂತ್ರಿಗಳು ತಾವೇ ಮುಂದೆ ಬಂದು ಈ ನಿರ್ಣಯದ ವಿಚಾರದಲ್ಲಿ ವೋಟು ಮಾಡುವುದಕ್ಕೆ ಅವಕಾಶವದಗಿಸಿ ಕೊಡಬೇಕಾಗಿತ್ತು. ಆದರೆ ಹಾಗೆ ಮಾಡದೆ, ಹೀಗೆ ಹಾಗೆ ಮಾಡಿ, ತ್ರಿಶಂಕುವಿನಂತೆ ಇತ್ತ ಕಡೆಯೂ ಹೋಗುವಂತಿಲ್ಲ; ಅತ್ತ ಕಡೆಯೂ ಹೋಗುವಂತಿಲ್ಲ ಎನ್ನುವಂತಾಗಿದೆ. ಹೀಗಾಗಿ ಈ ನಿರ್ಣಯ ಆಗಾಗ್ಗೆ ಬರುತ್ತಿದೆ.

Sri B. D. JATTI.—At the time, when the Resolution was being discussed, there was nobody to speak.

You also were not present. You went out. If any body wanted to speak, it would have continued for days together.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ನೀವು ಕೂಡ ಈ ರೀತಿ Explanation ಕೊಡುತ್ತಿರುವುದು ಬಹಳ ಚೆನ್ನಾಗಿದೆ. ಇದು ಬಹಳ ಸಂತೋಷದ ಸಂಗತಿ. ಈ ರೀತಿಯಾದ ಸಂಕೋಚ ರಾಜಕೀಯದಲ್ಲಿ ಇರಬಾರದು. ಇದಕ್ಕಿಂತ ಚುರುಕಾಗಿರಬೇಕು. ಇಷ್ಟೊಂದು ಅನುಮಾನ, ಕಷ್ಟದಿಂದ ಒಪ್ಪುವಂತಹ ಮನಸ್ಸು ಸರಕಾರಕ್ಕಿರಬಾರದು.

Sri B. K. PUTTARAMIYA.—Now it is nearing 12 O'clock. How long we should discuss this resolution? I want to move for closure.

Sri J. B. MALLARADHYA (Nanjangud).—I want to support the motion for closure. There is no sense of seriousness about this proposition. I want to know why we should go on like this. There does not seem to be any seriousness in any quarter.

Sri V. SRINIVAS SHETTY.—If the Chair is prepared to accept the closure motion I will yield and stop my speech.

ಶ್ರೀ ಎಂ. ಕೆ. ಬೊಮ್ಮೇ ಗೌಡ (ಕೃಷ್ಣರಾಜ ಪೇಟೆ).—ಮಾತನಾಡುವವರು ಇನ್ನೂ ಇರುವುದರಿಂದ ಕ್ಲೋಷರ್ ಮೋಷನ್ನಿಗೆ ಅವಕಾಶ ಕೊಡಬಾರದು.

Mr. DEPUTY SPEAKER.—There are other members who wish to speak.

Sri J. B. MALLARADHYA.—There was a suggestion from Sri Doddameti that the discussion on this should be continued in the Budget Session. Even granting that it will be taken up in the next session, have you made any allotment of time?

Mr. DEPUTY SPEAKER.—We shall close the discussion by 12-30.

Sri J. B. MALLARADHYA.—My friend Sri Puttaramiya moved a closure motion and I supported it. There is only one friend who wants to talk.

Mr. DEPUTY SPEAKER.—Sri Kothavale also wants to speak.

[MR. SPEAKER in the Chair]

Sri K. PUTTASWAMY (Mysore).—I raise a point of order. A closure motion was moved when Sri Srinivas Shetty, Leader of the Opposition, was speaking. When he was almost in the middle of the speech, the closure motion was moved. I want to know whether such a stage can be chosen for moving a closure motion.

Mr. SPEAKER.—No point of order can be raised in a vacuum.

†ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಸ್ವಾಮೀ, ಈ ಸಮಸ್ಯೆ ಕೆಲವು ಮಂದಿಗೆ ಮಹತ್ವದಾಗಿದೆ. ಹೆಸರು ಬದಲಾವಣೆಯಾಗಬಾರದು ಎಂದು ಕೆಲವರು ವಾದಿಸುತ್ತಿದ್ದಾರೆ. ಆದರೆ ಸ್ವಾತಂತ್ರ್ಯದ ಮುನ್ನ ಮತ್ತು ಅನಂತರ ಈ ರಾಜ್ಯನಿರ್ಮಾಣವಾದಾಗಲೂ ಸಹ ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಹಳೆಯ ಮೈಸೂರು ಈ ಪ್ರದೇಶದಲ್ಲಿ ಬಹುತೇಕ ಮಂದಿ ಕರ್ನಾಟಕವೇ ಆಗಬೇಕೆಂದು ಹೇಳುತ್ತಿದ್ದರು ಮತ್ತು ನಮ್ಮ ಆಶೆಯೂ ಹಾಗೆ ಇತ್ತು. ರಾಜ್ಯವಾಗ "ಕರ್ನಾಟಕ" ರಾಜ್ಯವಾಗುತ್ತದೆ, "ಕರ್ನಾಟಕ" ಎಂದೇ ಹೆಸರು ಇಡುತ್ತಾರೆ ಎಂದು ಜನರು ಭಾವಿಸಿದ್ದರು ಆಗ ಕರ್ನಾಟಕ ರಾಜ್ಯವಾಗಬೇಕಾದರೆ, ಉತ್ತರ ಕರ್ನಾಟಕ, ಸೇರಬೇಕೇ ಹೈದರಾಬಾದ್ ಕರ್ನಾಟಕ ಸೇರಬೇಕೇ ದಕ್ಷಿಣ ಕನ್ನಡ-ಕೊಡಗು ಸೇರಿ ರಾಜ್ಯವಾಗಬೇಕೇ ಎನ್ನುವ ಚರ್ಚೆಗಳಲ್ಲಿ ಹೇಗಾದರೂ ಎಲ್ಲಾ ಪ್ರದೇಶ ಸೇರಿ ಕರ್ನಾಟಕ ರಾಜ್ಯವಾದರೆ ಸಾಕು "ಮೈಸೂರು" ಎಂದು ಹೆಸರು ಇಡಬೇಕೇ ಬೇಡವೇ ಎನ್ನುವುದು ಅಂತಹಮಹತ್ವಾದ ಪ್ರಶ್ನೆಯಲ್ಲ ಎಂದು ಬಂದು ಕೆಲವು ರಾಜಕೀಯ ವ್ಯಕ್ತಿಗಳನ್ನು ನಮ್ಮ ಸರಕಾರಕ್ಕೂ ಮತ್ತು ಕೇಂದ್ರ ಸರಕಾರಕ್ಕೂ ರಾಜೀ ಆಗಿ ಮೈಸೂರು ರಾಜ್ಯವೆನ್ನುವ ಹೆಸರಿರಲಿ ಎಂದಾಯಿತು. ಇದರ ಬಗ್ಗೆ ಮುಖ್ಯ ಮಂತ್ರಿಗಳೇ ಜವಾಬ್ದಾರರು, ಅಥವಾ ಇನ್ನು ಯಾರೋ ಜವಾಬ್ದಾರರು ಎಂದು ನಾನು ಹೇಳುತ್ತಿಲ್ಲ. ಒಂದುರಾಜೀ ದೃಷ್ಟಿಯಿಂದ ಮೈಸೂರು ರಾಜ್ಯವೆಂದು ಹೆಸರಿದರಾಯಿತೇ ಹೊರತು ಈ ಪ್ರಶ್ನೆಯನ್ನು ಜನತೇ ಮುಂದೆ ಏನೂ ಇಡಲಿಲ್ಲ. ಅಸೆಂಬ್ಲಿ ಮುಂದೆಯೂ ಇಟ್ಟಿರಲಿಲ್ಲ. ಮೈಸೂರು ರಾಜ್ಯವಾಗ ಬೇಕೆಂದು ಯಾರೂ ಒಪ್ಪಿಗೆ ಕೊಟ್ಟಂತೆ ಇಲ್ಲ. ನಮ್ಮ ಮಿತ್ರರು ಕೆಲವರು ಶ್ರೀವಾರ್ ವಿ.ಪಿ. ದೀನದಯಾಳು ನಾಯ್ಡು ಅವರು "ಮೈಸೂರು ರಾಜ್ಯ" ಎಂದು ಹೆಸರಿಟ್ಟ ಮೇಲೆ ಇದನ್ನು ಯಾವ ರೀತಿಯಿಂದಲೂ ಬದಲಾವಣೆ ಮಾಡಲಿಕ್ಕೆ ಅಸಾಧ್ಯ ಎಂದರು. ನಮ್ಮ ರಾಜಾಂಗ ಘಟನೆ ಯಾವ ರೀತಿಯಿದೆ ಎಂದರೆ, ಪಾರ್ಲಿಮೆಂಟು ಒಂದು ರಾಜ್ಯದ ಹೆಸರನ್ನು ಬದಲಾಯಿಸುವುದಕ್ಕೆ ರಾಜಮನ್ನು ಇಬ್ಭಾಗಮಾಡಿ, ತುಂಡು ತುಂಡು ಮಾಡಿ ಬೇರೆ ಬೇರೆ ಯಾಗಿ ಮಾಡಲಿಕ್ಕೆ ಬೇರೆ ರಾಜ್ಯದಿಂದ ಕೆಲವು ಭಾಗಗಳನ್ನು ತಂದು ಇನ್ನೊಂದು ರಾಜ್ಯಕ್ಕೆ ಸೇರಿಸಲಿಕ್ಕೆ ಬೇಕಾದ ಅಧಿಕಾರವನ್ನು ಸಂಪೂರ್ಣವಾಗಿ ಇಟ್ಟುಕೊಂಡಿದೆ. ಈ ಅಧಿಕಾರ ಯಾವಾಗಲೂ ಪಾರ್ಲಿಮೆಂಟಿಗೆ ಇದ್ದೇ ಇದೆ.

†**Sri V. P. DEENADAYALU NAIDU.**—I did not say that this House or Parliament was not competent to do it. If you want to go back on your previous commitment, I have no objection. Let old Mysore retain the name of Mysore and let the integrated areas have any other name. I said 'let there be

bifurcation'. If there is no bifurcation, the name of Mysore should be retained for which I have abundant support.

12 NOON

†ಶ್ರೀ ವಿ. ಶ್ರೀನಿವಾಸಶೆಟ್ಟಿ.—ಸ್ವಾಮಿ, ಇಲ್ಲಿ ಹಿಂದೂಸ್ತಾನ ಪಾಕೀಸ್ತಾನ ಮಾಡಬೇಕೆಂದು ನನ್ನ ಆಶಯವಲ್ಲ. ಆ ರೀತಿಯಾದ ವಾದ ನನ್ನದು ಅಲ್ಲವೂ ಅಲ್ಲ. ಮೈಸೂರೇ ಆಗಲೀ, ಕರ್ಣಾಟಕವೇ ಆಗಲಿ, ಬಹುತೇಕ ಮಂದಿ ಒಪ್ಪುವಂತಾಗಬೇಕು. ನಮ್ಮೊಳಗೆ ಈ ರೀತಿ ವಾಗ್ಯುದ್ಧ ಆಗಬೇಕು, ಹಾಗೂ ದ್ವೇಷ ಮತ್ತು ವೈಷಮ್ಯಗಳಿಗೆ ಎಡೆಕೊಡಬೇಕೆನ್ನುವ ಪ್ರಶ್ನೆ ಇಲ್ಲಲ್ಲ. ನಾನು ವೈಯಕ್ತಿಕವಾಗಿ ಹೇಳುವುದಾದರೆ ನನಗೆ ಮೈಸೂರಾದರೂ ಸಂತೋಷವೇ, ಕರ್ಣಾಟಕವಾದರೂ ಸಂತೋಷವೇ. ನಾನು ಈಗ ವೈಯಕ್ತಿಕ ಪ್ರಶ್ನೆಯನ್ನು ಮುಂದೆ ಎತ್ತುವುದಿಲ್ಲ. ದೇಶದ ಬಹುತೇಕ ಮಂದಿ ಏನು ಅಭಿಲಾಷೆ ಪಾಡುತ್ತಾರೆ, ಏನು ಆಸೆ ಇಟ್ಟುಕೊಂಡಿದ್ದಾರೆನ್ನುವ ಪ್ರಶ್ನೆಯನ್ನು ಎತ್ತುತ್ತಿದ್ದೇನೆ. ಹಳೆಯ ಮೈಸೂರಿನಲ್ಲಿ 'ಕರ್ಣಾಟಕ ರಾಜ್ಯ' ಆಗಬೇಕೆಂದು ಹೇಳುವವರು ಬಹು ಮಂದಿ ಇದ್ದಾರೆ. ಈ ಸಭೆಯಲ್ಲಿ ಸಹ ಹಳೆಯ ಮೈಸೂರಿನವರು ಕರ್ಣಾಟಕ ರಾಜ್ಯವಾಗಬೇಕೆಂದು ಹೇಳುವವರು ಇದ್ದಾರೆ. ಹಳೆಯ ಮೈಸೂರಿನ ಅನೇಕ ಮಂದಿ, ಸ್ವಲ್ಪಮಟ್ಟಿಗೆ ತಪ್ಪಿರಬಹುದು, ಬಹುತೇಕ ಮಂದಿ ಕರ್ಣಾಟಕ ರಾಜ್ಯ ಆಗಬೇಕೆಂದು ಇದ್ದಾರೆನ್ನುವುದು ನನ್ನ ಅಭಿಪ್ರಾಯ. 'ಮೈಸೂರು' ಎಂಬ ಹೆಸರೇ ಇರಬಹುದು. ಅದೂ ತಪ್ಪು ಎಂದು ಹೇಳುವುದಿಲ್ಲ. ಮನುಷ್ಯನಿಗೆ ಒಂದು ಆಸೆ ಇರುತ್ತದೆ. ಹೆಸರನ್ನು ಏಕೆ ಬದಲಾವಣೆ ಮಾಡಬೇಕು ? ನೀವು ನಮ್ಮ ಮನೆಗೆ ಬಂದಿದ್ದೀರಿ, integrated areas ನಿಂದ ನಮ್ಮಲ್ಲಿಗೆ ಬಂದಿದ್ದೀರಿ ಎನ್ನುವ ಭಾವನೆ ತಪ್ಪೋ, ಸರಿಯೋ ಅಂತೂ ಆ ಭಾವನೆ ಇದೆ. ನಾವೆಲ್ಲರೂ ಸಹ ಈಗ ಒಂದು ಮನೆಯಲ್ಲಿದ್ದೇವೆ. ಅದಕ್ಕೆ ಒಂದು ಹೆಸರನ್ನಿಡಬೇಕಾಗಿದೆ. ಹೆಸರಿಡುವಾಗ ಅವಸರವಾಗಿ ಯಾರೋ ಕೆಲವರು ಕೂಡಿ ಒಂದು ಹೆಸರನ್ನಿಟ್ಟಿದ್ದಾರೆ. ಅದಕ್ಕೆ ಎಲ್ಲರ ಒಪ್ಪಿಗೆಯೂ ಇದ್ದರೆ, ಅದೇ ಹೆಸರು ಇರಬಹುದು. ನನ್ನ ಅಕ್ಷೇಪಣೆ ಇಲ್ಲ. ಆ ಹೆಸರಿಗೆ ಎಲ್ಲರೂ ಒಪ್ಪಿಕೊಂಡಿದ್ದಾರೆಯೇ? ಒಪ್ಪಿಕೊಳ್ಳದೆ ಇರುವಾಗ ಬದಲು ಮಾಡುವುದಕ್ಕೆ ಅವಕಾಶವಿದೆ. ಬಹುಮಂದಿ ಒಂದು ತೀರ್ಮಾನಕ್ಕೆ ಬರುವಾಗ ಆ ಹೆಸರನ್ನು ಇಡಬೇಕೇ ಬೇಡವೇ, 'ಮೈಸೂರು' ಎಂದು ಕರೆಯಬೇಕೆ, 'ಕರ್ಣಾಟಕ' ಎಂದು ಕರೆಯಬೇಕೇ ಎಂಬುದನ್ನು ತೀರ್ಮಾನ ಮಾಡೋಣ. ರಾಜ್ಯ ಇಬ್ಭಾಗವಾಗಬೇಕಾದ್ದೂ; ತುಂಡಾಗಬೇಕಾದ್ದೂ ಏಕೆ? ಏಕೆ ಅಷ್ಟೊಂದು ಬೇಸರ ಪಟ್ಟುಕೊಳ್ಳುತ್ತಿದ್ದಾರೆ ? ಬೇಸರಪಟ್ಟುಕೊಳ್ಳುವ ಆವಶ್ಯಕತೆ ಇಲ್ಲ. ಪ್ರಜಾಪ್ರಭುತ್ವದ ರೀತಿನೀತಿಯಲ್ಲಿ ಬಹುತೇಕ ಮಂದಿ ಯಾವ ಹೆಸರನ್ನು ಇಡಬೇಕೆಂದು ನಿರ್ಣಯ ಮಾಡುತ್ತಾರೆಯೋ ಆ ರೀತಿ ಮಾಡಬೇಕು. ಮೈಸೂರು, ದಕ್ಷಿಣ ಕರ್ಣಾಟಕ, ಕೊಡಗು, ಉತ್ತರ ಕರ್ಣಾಟಕ, ಹೈದರಾಬಾದ್ ಕರ್ಣಾಟಕ, ಈ ಎಲ್ಲ ಭಾಗಗಳ ಜನರ ಅಭಿಮತವನ್ನು ತೆಗೆದುಕೊಂಡು ಮಾಡೋಣವೆಂದರೆ ಅದಕ್ಕೆ ನನ್ನ ಆಕ್ಷೇಪಣೆಯಿಲ್ಲ. ನಾವು ಎಲ್ಲರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ಎಲ್ಲ ಕಡೆಗಳಲ್ಲಿಯೂ ballot ತೆಗೆದುಕೊಳ್ಳುವುದು, ಎಲ್ಲರ ಮತ ತೆಗೆದುಕೊಳ್ಳುವುದು ಎಂದರೆ ಕಷ್ಟಕರವಾದ ಸಂಗತಿ. ನಾವು ಎಲ್ಲರ ಪ್ರತಿನಿಧಿಗಳಾಗಿ ಬಂದಿರುವುದರಿಂದ ನಮ್ಮ ಮತಗಳನ್ನು ತೆಗೆದುಕೊಂಡು ತೀರ್ಮಾನ ಮಾಡಿದರೆ ಅದು ದೇಶದ ಬಹುಮತ ಎಂದು ಕಾಣುತ್ತದೆ. ಇದು ಪ್ರಜಾಪ್ರಭುತ್ವದ ರೀತಿ. 'ಮೈಸೂರು' ಎಂಬ ಹೆಸರನ್ನೇ ಇಟ್ಟರೂ ಬಹಳ ಸಂತೋಷಪಡುತ್ತೇನೆ. ಬಹುಮತದಿಂದ ತೀರ್ಮಾನವಾದರೆ ಆಕ್ಷೇಪಣೆ ಮಾಡುವುದೂ ಬೇಡ. ಮಾನ್ಯ ದೊಡ್ಡಮೇಟಿಯವರನ್ನು ಸಹ ಈ ಠರಾವನ್ನು ಪುನಃ ತರಬೇಡಿ ಎಂದು ಕೇಳುತ್ತೇನೆ. ಈ ವಿಚಾರದಲ್ಲಿ ಒಂದು ತೀರ್ಮಾನ ಮಾಡಿರಿ ಎಂದು ಸರ್ಕಾರವನ್ನೂ ಆಳುವ ಪಕ್ಷವನ್ನೂ ಅತಿ ವಿನಯದಿಂದ ಕೇಳುತ್ತೇನೆ. ಈ ದೇಶದ ಹಣವನ್ನು ಈ ರೀತಿ ವ್ಯರ್ಥಮಾಡುತ್ತೀರಿ. ದೇಶದ ಸಮಯ ಅಸೆಂಬ್ಲಿಯಲ್ಲಿ ಈ ರೀತಿ ವ್ಯರ್ಥವಾಗುತ್ತದೆ. ಏಕೆ ಇದನ್ನು ಖೈದು ಮಾಡುವುದಿಲ್ಲ, ಯಾವುದಾದರೂ ಒಂದು ರೀತಿಯಲ್ಲಿ ಮಾಡಿ, ಕಳೆದ ಎರಡು ಮೂರು ದಿವಸಗಳಿಂದ ಈ ಠರಾವು ತೀರ್ಮಾನವಾಗದೆ ಅಸೆಂಬ್ಲಿಯ ಮುಂದೆ ಇದೆ. ಈ ಠರಾವಿನ ಮೇಲೆ ಇನ್ನು ಮಾತನಾಡುವವರಿದ್ದರೆ ಮಾತನಾಡಲು. ನಾರ್ಯಾರು ದಿವಸಗಳಾದರೂ ಈ ಒಂದೇ ಠರಾವನ್ನು ತೆಗೆದುಕೊಂಡು ಖೈದು ಮಾಡೋಣ. ಈ ಠರಾವು ಜೀವಂತವಾಗಿರುವವರೆಗೂ ಬೇರೆ ಠರಾವುಗಳಿಗೆ ಅವಕಾಶವಿರುವುದಿಲ್ಲ. ಅನೇಕ ಪ್ರಾಮುಖ್ಯವಾದ ಪ್ರಶ್ನೆಗಳಿವೆ. ಇದೇ ಠರಾವನ್ನು ಎರಡು ವರ್ಷ ಬೇಕಾದರೂ ಚರ್ಚೆ ಮಾಡಬಹುದು. ಅಲ್ಲಿಗೆ ಮಹಾಚುನಾವಣೆಗಳು ಬರುತ್ತವೆ. ಚುನಾವಣೆಯಾದನಂತರ ಮತ್ತೆ ಈ ಠರಾವು ನಮ್ಮ ಈ ಸಭೆಯ ಮುಂದೆ ಬರಬಹುದು. ಈ ವಿಷಯದ ಮೇಲೆ ಪುನಃ ಚರ್ಚೆ ಮಾಡುತ್ತ ಇರಬಹುದು. ಹಾಗೆ ಮಾಡಬಾರದು. ಆಡಳಿತ ಪಕ್ಷದಲ್ಲಿಯೂ 'ಕರ್ಣಾಟಕ' ಎಂದು ಕರೆಯಬೇಕೆನ್ನುವವರು ಹೆಚ್ಚು ಜನರಿದ್ದಾರೆ. ಮೈಸೂರು ಎಂದು ಇದಲು ಹೆಚ್ಚು ಜನ ಒಪ್ಪಲಾರರು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಒಂದು ಇತ್ಯರ್ಥ ಮಾಡಬೇಕು. ಹೀಗೆಯೇ ತ್ರಿಶಂಕು ಸ್ವರ್ಗದಲ್ಲಿ ಬಿಟ್ಟಿರುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳ ಕಷ್ಟ ಏನೆಂಬುದು ನಮಗೆ ಅನುಭವವಾಗುತ್ತವೆ, ತಿಳಿಯುತ್ತದೆ. ನಾನು ಹೆಚ್ಚು ಬರುಸುನುಡಿಯಿಂದ ಮಾತನಾಡುವುದಿಲ್ಲ. ಆದರೆ ಇಂಥ ಸಂದರ್ಭಗಳಲ್ಲಿ ಅವರು ಯಾವುದಾದರೂ ಒಂದು ದಿವಸ ತೀರ್ಮಾನಕ್ಕೆ ಬರಲೇ ಬೇಕಾಗುತ್ತದೆ. ಮಂತ್ರಿಮಂಡಳದಲ್ಲಿ ಈ ಪ್ರಶ್ನೆಯನ್ನು ತಂದರೆ ಬಹುತೇಕ ಮಂದಿಯ ಅಭಿಪ್ರಾಯ 'ಕರ್ಣಾಟಕ' ಎಂದು ಕರೆಯಬೇಕು ಎನ್ನುವುದಕ್ಕೆ ಬರಬಹುದೆಂದು ಕಾಣುತ್ತದೆ. ಇಂಥ ಸಂದರ್ಭದಲ್ಲಿ ಈ ಠರಾವು ಎಷ್ಟೇ ಮುಖ್ಯವಾಗಿರಲಿ, ನಾಲ್ಕೈದು ದಿನ ಚರ್ಚೆಮಾಡುತ್ತ ಕುಳಿತುಕೊಳ್ಳುವುದು ಸರಿಯಲ್ಲ. ಈ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬರಲು ಸದಸ್ಯರು ಮಾತನಾಡಿದರೂ ಬರಬಹುದು, ಮಾತನಾಡದೆ ಇದ್ದರೂ ಬರಬಹುದು. ಆದುದರಿಂದ ನಾನು ಸರ್ಕಾರವನ್ನೂ ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದಿಷ್ಟೇ ಈ ಠರಾವಿನ ಮೇಲೆ ಆದಷ್ಟು ಬೇಗನೆ ತೀರ್ಮಾನಕ್ಕೆ ಬರುವಂತೆ ಮಾಡಿ, ಇದರ ಮೇಲಿನ ಚರ್ಚೆಗೆ ಹೆಚ್ಚು ಅವಕಾಶವಿಲ್ಲದಂತೆ ಮಾಡಿ, ಇನ್ನುಳಿದಿರುವ ಅರ್ಧಗಂಟೆಯೊಳಗೆ ಓಟಿಗೆ ಹಾಕಿ ತೀರ್ಮಾನಕ್ಕೆ ಬರುವಂತೆ ಮಾಡಬೇಕು. ಈ ಬಡ್ಜೆಟ್ ಅಧಿವೇಶನ, ಬರುವ ಬಡ್ಜೆಟ್ ಅಧಿವೇಶನ ಎಂದು ಮುಂದಕ್ಕೆ ಹಾಕದೆ, ಆದಷ್ಟು ಬೇಗನೆ ತೀರ್ಮಾನ ಮಾಡಬೇಕೆಂದು ಕೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri B. K. PUTTARAMIYA.—This is sufficiently debated upon. We have got very litle time before us. Government have to reply. So I am moving for closure.

Mr. SPEAKER.—In this connection, I shall read Rule 299.

> "At any time after a motion has been made, any member may move, 'That the question be now put', and, unless it appears to the Speaker that the motion is an abuse of these rules or an infringement of the right of reasonable debate, the Speaker shall then put the motion: 'That the question be now put'."

When a closure motion is moved, the Speaker will have to put it to the House, but before he does that, he has his own discretion. Whether the motion appears to be an abuse of the rules or an infringement of reasonable debate in these two cases, he may put it to the House. I learn that six members have taken part in the debate and others also are going to take part in the debate. If I now put the motion to the House, it will be an infringement of the right of reasonable debate. So I cannot accept the closure motion.

Sri M. C. NARASIMHAN.—The question arises only when you come to the conclusion that there is an abuse...

Mr. SPEAKER.—I have made it clear that discretion rests with the Speaker under two circumstances: one is abuse of the rules and second, infringement of the right of reasonable debate.

†ಶ್ರೀ ಎಂ.ಕೆ. ಬೊಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ನುಮಾರು ಮೂರು ವರ್ಷಗಳಿಂದಲೂ ಈ ನಿಲ್ಲಯ ಬರುತ್ತಿದೆ. ಕೆಲವೇ ಸದಸ್ಯರು ಬಹಳ ಶ್ರದ್ಧೆವಹಿಸಿ ಈ ನಿರ್ಣಯವನ್ನು ಏಕೆ ತರುತ್ತಿದ್ದಾರೆಂದು ನನಗಾದರೂ ಅರ್ಥವಾಗುವುದಿಲ್ಲ. ನನ್ನ ಹಿಂದೆ ಮಾತನಾಡಿದಂಥ ಶ್ರೀಮಾನ್ ಶ್ರೀನಿವಾಸ ಶೆಟ್ಟರು ಮತ್ತು ವಯೋವೃದ್ಧರಾಗಿರತಕ್ಕ ನಮ್ಮ ಮಾನ್ಯ ದೊಡ್ಡಮೇಟಿ ಅಂದಾನಪ್ಪನವರು, ಚುನಾವಣೆ ಕಾಲದಲ್ಲಿ ಬಹುಶಃ ಇದೇ mandateನ್ನು ಜನಗಳ ಮುಂದೆ ಇಟ್ಟು, ಈ ಒಂದು ವಿಷಯವಲ್ಲದೆ ಬೇರೆ ಕೆಲಸವನ್ನು ಮಾಡುವುದಿಲ್ಲವೆಂದು ತೀರ್ಮಾನ ಮಾಡಿಕೊಂಡು ಬಂದಿದ್ದಾರೆಯೋ ಏನೋ ಎನ್ನುವ ರೀತಿಯಲ್ಲಿ ಈ ನಿರ್ಣಯವನ್ನು ಆಗಾಗ್ಗೆ ಈ ಸಭೆಯ ಮುಂದೆ ತರುತ್ತಿದ್ದಾರೆ.

ಶ್ರೀ ಶ್ರೀನಿವಾಸಶೆಟ್ಟರು ಒಂದು ಪಕ್ಷದ ಮುಖಂಡರು. ತತ್ಪಕ್ಷದೃಷ್ಟಿಯಿಂದ ಇಡಿಯ ದೇಶದ, ಸಮಾಜದ ಅಭಿವೃದ್ಧಿಗೆ ಅವಶ್ಯಕವಾದ ಹೋರಾಟವನ್ನು ನಡೆಸತಕ್ಕದ್ದು ಅಂತಹ ರಾಜಕೀಯ ಮುಖಂಡರ ಒಂದು ಲಕ್ಷಣ. ಆದರೆ ಆ ರೀತಿ ಯಾವುದೂ ಇಲ್ಲ. ಹೆಸರು ಬದಲಾಯಿಸುವುದರಲ್ಲಿ 'ಯಾವ ಸಾಮಾಜಿಕ ಉದ್ಧಾರವಾಗಲೀ ಆರ್ಥಿಕ ಉದ್ಧಾರವಾಗಲೀ ಅಥವಾ ಸ್ವಾಭಾವಿಕವಾದಂತ ನ್ಯಾಯವಾಗಲಿ ದೊರಕುವ ಪಕ್ಷದಲ್ಲಿ ಈ ನಿರ್ಣಯಕ್ಕೆ ಬೆಂಬಲ ಕೊಟ್ಟು ಮಾತನಾಡಬಹುದಾಗಿತ್ತು. ಇದರಲ್ಲಿ ಏನಾದರೂ ಸತ್ಯವಿದೆಯೇ, ನ್ಯಾಯವಿದೆಯೇ, ಯಾವುದೂ ಇಲ್ಲ. ಬರಿ ಹೆಸರಿಗಾಗಿ ಹೋರಾಟ ಮಾಡುವುದಾದರೆ ನಮ್ಮೂರು ಚೆಂದವೊ, ನಿಮ್ಮೂರು ಚೆಂದವೋ ಎಂದು ನಾವು ಹುಡುಗರಾಗಿದ್ದಾಗ ಹೊಡೆದಾಡಿದ ಹಾಗೆ ಆಗುತ್ತದೆ. ಎರಡು ಊರುಗಳವರು ಒಂದು ಕಡೆ ಸೇರಿದಾಗ ನವ್ಮ ಊರು ಚೆಂದ, ನಮ್ಮ ಊರು ಚೆಂದ ಎಂದು ಹೋರಾಟ ಮಾಡಿ ಕೊನೆಗೆ ನುಮ್ಮನೆ ಮನೆಗೆ ಹೋಗುತ್ತಿದ್ದೆವು. ಈ ವಿಷಯ ಹಾಗೆ ಇದೆ. ಯಾತಕ್ಕೆಂದರೆ ಈಗ ಎರಡು ಮೂರು ವರ್ಷಗಳಿಂದಲೂ ಕರ್ನಾಟಕ ಆಗಬೇಕೋ ಅಥವಾ ಮೈಸೂರು ಹಾಗೆಯೇ ಉಳಿಯಬೇಕೋ ಎನ್ನುವುದರಲ್ಲೇ ಗಣ್ಯ ವ್ಯಕ್ತಿಗಳು, ಬುದ್ಧಿವಂತರು ಮತ್ತು ದೇಶದ ಜನತೆಗಾಗಿ ದುಡಿಯತಕ್ಕ ಉಭಯ ಪಕ್ಷಗಳವರೂ ಚರ್ಚೆ ಮಾಡುತ್ತಿದ್ದಾರೆ. ರಾಜಕೀಯದ ಎದುರು ಪಾರ್ಟಿಯವರು ಈ ನಿರ್ಣಯದ ವಿಚಾರದಲ್ಲಿ ಇಷ್ಟು ತೀವ್ರವಾಗಿ ಹೊಡೆದಾಡುತ್ತಾರೆ ಎಂದು ನಾನು ನಂಬಿರಲಿಲ್ಲ. ನನಗೆ ಈ ವಿಷಯದಲ್ಲಿ ಮಾತನಾಡಬೇಕೆಂಬ ಚಪಲ ಇರಲಿಲ್ಲ. ಆದರೆ ಬುದ್ಧಿವಂತರು, ರಾಜಕೀಯ ಮುಂದಾಳುಗಳು ಕಾಲ ಕಳೆಯುತ್ತಾ ಮಾತನಾಡುತ್ತಿರುವಾಗ ನಾನೇಕೆ ಮಾತನಾಡಬಾರದು ಎನ್ನಿಸಿತು. ಇಲ್ಲದೆ ಇರತಕ್ಕ ಒಂದು ದೊಡ್ಡ ವಸ್ತು ಏನೋ ಇದೆಯೆಂದು ಹೇಳುತ್ತಾ ಮೈಸೂರು ಎಂದು ಇರಬೇಕೇ, ಅಥವಾ ಕರ್ನಾಟಕ ಎಂದು ಇರಬೇಕೇ ಎಂದು ಗಂಟೆಗಟ್ಟಲೇ ಚರ್ಚೆಮಾಡಿ ವ್ಯಾಖ್ಯಾನವನ್ನು ಬೆಳೆಸುತ್ತಿದ್ದಾರೆ. ಇದರಲ್ಲಿ ಅಂಥಾ ವಸ್ತು ಏನು ಇದೆಯೋ ನನಗಂತೂ ಅರ್ಥವಾಗುವುದಿಲ್ಲ. ಶ್ರೀ ಶ್ರೀನಿವಾಸ ಶೆಟ್ಟರು ಹೇಳಿದರು ಪಾರ್ಲಿಮೆಂಟಿನಲ್ಲಿ ಜನಾಭಿಪ್ರಾಯ ಇಲ್ಲದೆ ತೀರ್ಮಾನ ಮಾಡಿದ್ದಾರೆಂದು. ಮೈಸೂರು ದೊಡ್ಡದಾಗುವಾಗ ನಮ್ಮ ಮುಖಂಡರು ವಿಧಾನ ಸಭೆಯೊಳಗೆ ಮೈಸೂರು ಎನ್‌ಲಾರ್ಜ್ ಆಗಬೇಕು ಎನ್ನುವ ನಿರ್ಣಯವನ್ನು ತಂದಿದ್ದರು. ಇಡಿಯ ಮೈಸೂರಿನ ಜನತೆಯ ಅಭಿಪ್ರಾಯದಂತೆ ಆಗಿರತಕ್ಕದ್ದು. ಜನಾಭಿಪ್ರಾಯ ಇಲ್ಲದೆ ಯಾರೋ ಮಾಡಿರತಕ್ಕದ್ದು ಎಂದು ಹೇಳತಕ್ಕಂಥ ವಾದ ಶುದ್ಧ ತಪ್ಪು. ಆದುದರಿಂದ ದಯವಿಟ್ಟು ಹಿಂದಿನ ಅಸೆಂಬ್ಲಿಯಲ್ಲಿ ಆಗಿರತಕ್ಕ ನಿರ್ಣಯವನ್ನು ನೋಡಬೇಕು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ಕರ್ನಾಟಕ ಎಂದು ಹೆಸರು ಇಲ್ಲದಿದ್ದರೆ ಒಗ್ಗಟ್ಟು ಬರುವುದಿಲ್ಲ; ಎಮೋಷನಲ್ ಇಂಟಿಗ್ರೇಷನ್ ಆಗುವುದಿಲ್ಲ, ಎಂದು ಹೇಳತಕ್ಕ ವಾದ ಇದೆ. ಏತಕ್ಕೆ ಆಗುವುದಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಮೈಸೂರು ಎಂದು ಹೇಳಿದರೆ ಬಹುಶಃ ನಿಮಗೆ ಹಿಡಿಸುವುದಿಲ್ಲ. ಕರ್ನಾಟಕ ಎಂದರೆ ನಮಗೆ ಹಿಡಿಸುವುದಿಲ್ಲ. ಮದ್ರಾಸು ಒಂದು ಊರಲ್ಲವೇ, ಬೊಂಬಾಯಿ ಒಂದು ಊರಲ್ಲವೇ? ಆ ದೇಶಗಳಿಗೆ ಆ ಊರಿನ ಹೆಸರುಗಳನ್ನು ಇಡಲಿಲ್ಲವೇ? ಹೀಗಿರುವಾಗ ಆ ರೀತಿ ವಾದಗಳು ಏತಕ್ಕೆ? ಇಂಡಿಯಾ ದೇಶದಲ್ಲಿ ಇಪ್ಪತ್ತಿನ ದಿವಸ ಎಷ್ಟೋ ರಾಜ್ಯಗಳು ಭಾಷಾವಾರು ತಳಹದಿಯ

ಮೇಲೆ ಆಗಿಲ್ಲ. ಹೀಗಿರುವಾಗ ಹೆಸರನ್ನು ಬದಲಾಯಿಸಬೇಕು ಎಂದು ಪುನಃ ಪುನಃ ಅದನ್ನೇ ಕಲಕುತ್ತಾ ಇರುವುದರಿಂದ ಏನು ಅರ್ಥವಾಗುತ್ತದೆ? ಕರ್ನಾಟಕ ಆಗದೆ ಇದ ಪಕ್ಷದಲ್ಲಿ ಬೇರೆ ಆಗಬೇಕು ಎನ್ನುವ ಉದ್ದೇಶ ನಿಮಗೆ ಇದ್ದರೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಕರ್ನಾಟಕ ಆಗಬೇಕೆಂಬ ವಾದ ಮಾಡುತ್ತಾ ಇರುವುದು ಬಹು ಮುಖ್ಯವಾದುದು ಮತ್ತು ಅದರಿಂದ ಎಲ್ಲರಿಗೂ ಸಂತೋಷ ಆಗುತ್ತದೆ. ಬೇರೆ ಆಗುವ ಭಾವನೆ ಇಲ್ಲ. ಯಾವ ಕಾರಣದಿಂದಲೂ ಆ ಮಾತನ್ನು ಹೇಳಬಾರದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಇವೊತ್ತಿನ ದಿವಸ ಪೋಟಿನನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಇದು ಮೆಜಾರಿಟಿ, ಮತ್ತು ಮೈನಾರಿಟಿ ಪ್ರಶ್ನೆಯಲ್ಲ. ಮೈನೂರು ಎನ್ನುವುದರಿಂದ ಅಪಮಾನವಾಗುತ್ತದೆಯೇ ದಯವಿಟ್ಟು ತಿಳಿಸಬೇಕೆಂದು ನಾನು ಹೇಳುತ್ತೇನೆ. ಮೈನೂರು ದೇಶ ಇಂಡಿಯಾ ದೇಶ ಮತ್ತು ಪರದೇಶದಲ್ಲಿಯೂ ಖ್ಯಾತಿಯನ್ನು ಪಡೆದಿದೆ. ನಿನ್ನೆಯ ದಿವಸವಿಧಾನ ಪರಿಷತ್ತಿನ ಚೇರ್ಮನ್ ಅವರು ಆಸ್ಟ್ರೇಲಿಯಾದಲ್ಲಿ ಪ್ರವಾಸ ಮಾಡಿದ ವಿಷಯವನ್ನು ಹೇಳುತ್ತಾ ಹೇಳಿದರು. ಆ ದೇಶದಲ್ಲಿ ಮೈನೂರಿನ ವಿಚಾರದಲ್ಲಿ ದೊಡ್ಡ ಅಭಿಮಾನವನ್ನು ಬೆಳೆಸಿದ್ದಾರೆಂದು. ಹೀಗಿರುವಾಗ ಮೈ ನೂ ರು ಎಂದು ಹೇಳಿದರೆ ಏನು ಅವಮಾನವಾಗುತ್ತದೆ? ಇದಕ್ಕೆ ಏತಕ್ಕೆ ಹೋರಾಟವನ್ನು ನಡೆಸುತ್ತಿದ್ದಾರೆ ಎಂದು ನನ್ನ ಪ್ರಶ್ನೆ. ಪೊನ್ನೆತಾನೆ ನಾನು ಮುಸ್ಸೋರಿಗೆ ಪ್ರವಾಸ ಹೋಗಿದ್ದಾಗ ಯಾವುದೋ ಪ್ರಕರಣ ನಡೆದಾಗ ಇತರ ದೇಶದ ಎಲ್ಲಾ ಪೆಂಬರುಗಳಿಂದ ಒಂದು ಪ್ರಶ್ನೆ ಬಂತು. ಆಗ ಮೈನೂರು ಬಹಳ ಸೌಮ್ಯವಾದ ದೇಶ, ಲಾಫ್ಲಿ ಸ್ಟೇಟ್, ಇಂಥಾ ಸ್ಟೇಟಿನಲ್ಲಿ ಈ ರೀತಿ ವಿದ್ಯಾರ್ಥಿಗಳ ಗಲಾಟೆ ಆಗುವುದಾದರೆ ಅದು ಶೋಚನೀಯ ಎಂದು ಹೇಳಿದರು. ಇಂಥಾ ಸೌಮ್ಯ ಸಂಸ್ಕೃತಿ ದೇಶದಲ್ಲಿ ಹೀಗೆ ಆಗಬೇಕಾದರೆ ಏನು ಮಾಡುವುದು ಎಂದರು. ಯಾವ ದೇಶದ ಜನರೂ ಈ ರೀತಿ ಇಲ್ಲ. ಇದು ನಿಜವಾದ ಮಾತು. ಇಂಥಾ ಸಂದರ್ಭದಲ್ಲಿರುವಾಗ ಮೈನೂರು ಹಿಂದಿನಿಂದಲೂ ತನ್ನದೇ ಆದ ಒಂದು ಗೌರವ, ಕೀರ್ತಿ, ವೈಶಿಷ್ಟ್ಯತೆ ಇವುಗಳನ್ನು ಉಳಿಸಿಕೊಂಡು ಬಂದಿದೆ. ಖ್ಯಾತಿಯನ್ನು ಬೆಳಸಿಕೊಂಡು ಬಂದಿದೆ. ಆದುದರಿಂದ ಈ ಹೆಸರು ಏತಕ್ಕೆ ಬದಲಾಯಿಸಬೇಕು ಎಂದು ನನಗೆ ಅರ್ಥವಾಗುವುದಿಲ್ಲ. ಹಿಂದೆ ಚಿಕ್ಕ ಮೈ ನೂ ರು ಆಗಿದ್ದಾಗ ಇದೇ ವಿಧಾನ ಸಭೆಯಲ್ಲಿ ಒಂದು ರೆಸೆಲ್ಯೂಷನ್ ತಂದು, ಮೈ ನೂ ರ ನ್ನು ವಿಶಾಲ ಗೊಳಿಸಬೇಕು ಎಂದು ತಂದಿದ್ದರು. ಈ ರೆಸೆಲ್ಯೂಷನ್‌ಗೋಸ್ಕರ ಹೋರಾಟ ನಡೆದಿದೆ. ಇಂಡಿಯಾ ದೇಶದಲ್ಲಿ ಭಾವನೆಗಳು ಬದಲಾವಣೆಯಾಗುತ್ತಾ ಇರುವಾಗ ನಾವುಗಳು ಎಲ್ಲಾ ಒಂದುಗೂಡಿ, ಕನ್ನಡಿಗರೆಲ್ಲಾ ಒಂದು ಪ್ಯಾಂತದಲ್ಲಿ ಇರುತ್ತೇವೆಂದು ಹೇಳಿದ್ದರು. ಅದರ ಮೇಲೆ ನಾವೆಲ್ಲಾ ಒಪ್ಪಿಕೊಂಡೆವು. ಹೀಗಿದ್ದಮೇಲೂ, ನೀವು ಕರ್ನಾಟಕ ಎಂದು ಹೆಸರಿಡಬೇಕಾದರೆ ನಿಮ್ಮ ಉದ್ದೇಶ ಏನು? ಮೈನೂರು ಎಂದು ಏತಕ್ಕೆ ಇರಬಾರದು? ಇವೊತ್ತಿನ ದಿವಸ ನಾವು ಸ್ವಾತಂತ್ರ್ಯವನ್ನು ಗಳಿಸಿ 12 ವರ್ಷ ಆಯಿತು. ದೇಶದಲ್ಲಿ ನಾವು ಏನು ಪ್ರಗತಿ ಸಾಧಿಸಬೇಕೋ ಅದು ಸಾಧನೆಯಾಗಿದೆಯೇ ಇಲ್ಲವೇ ಎನ್ನುವುದು ಮುಖ್ಯವಾಗಿರುವಾಗ ನನ್ನ ದೃಷ್ಟಿಯಲ್ಲಿ ಇದು ಕ್ಷುಲ್ಲಕ ವಿಷಯ ಎಂದು ಭಾವನೆ ಮಾಡಿಕೊಂಡಿದ್ದೇನೆ. ಶ್ರೀ ಅಂದಾನಪ್ಪ ದೊಡ್ಡ ಮೇಟಿಯವರು ಇದನ್ನೇ ದೊಡ್ಡದಾಗಿ ಮಾಡಿ ಒಂದು ರಾಜಕೀಯವನ್ನು ಬೆಳಸಿಕೊಂಡು ಬರುವುದನ್ನು ನೋಡಿದರೆ ನನಗಂತೂ ಆಶ್ಚರ್ಯವಾಗುತ್ತದೆ. ನಾನು ಮುಸ್ಸೋರಿಯಲ್ಲಿದ್ದಾಗ ಕನ್ನಡ ಪೇಪರನ್ನು ತರಿಸಿ ಓದುತ್ತಿದ್ದೆ. ಶ್ರೀ ರಾಮಪ್ಪನವರು ಹೇಳಿದ್ದಾರೆ ಏನೋ ಒಂದು ರಾಜಕೀಯ ಬೆದರಿಕೆಗೋಸ್ಕರ ಹೆಸರನ್ನು ಬದಲಾಯಿಸುವುದನ್ನು ಹಿಂದೆಗೆಯುತ್ತಿದ್ದಾರೆಂದು. ಕಾಂಗ್ರೆಸ್‌ನವರು ಬೆದರಿಕೆಗೆ ಹೆದರಬೇಕಾದ್ದು ಇಲ್ಲ ಎಂದು ನಾನು ಹೇಳುತ್ತೇನೆ. ಕಾಂಗ್ರೆಸ್ ಸಂಸ್ಥೆ ಸರ್ಕಾರದಲ್ಲಿ ಇದ್ದು ಸರ್ವೀಸ್ ಮಾಡಬೇಕು ಎನ್ನುವುದನ್ನು ದೇಶದ ಜನ ಒಪ್ಪಿಕೊಂಡಿದ್ದಾರೆ. ಆದುದರಿಂದ ನೀವು ಈ ಹೆಸರನ್ನು ಬದಲಾಯಿಸುವುದಕ್ಕೆ ಹೋರಾಡಿದರೆ ಅದನ್ನು ನಾವು ಒಪ್ಪಿಕೊಳ್ಳುವುದಿಲ್ಲ.

ಸ್ವಾತಂತ್ರ್ಯವನ್ನು ಗಳಿಸಿದಮೇಲೆ ನಾವು ನತ ತವೂ ದೇಶಾಭಿವೃದ್ಧಿಗಾಗಿ ಹೋರಾಡುತ್ತಿದ್ದೇವೆ. ಇಂಥಾದ್ದರಲ್ಲಿ ಅದಕ್ಕಾಗಿ ಹೆದರಬೇಕಾದ ಪ್ರಮೇಯವಿಲ್ಲ. ಅಂತಹ ರಾಜಕೀಯ ಮನೋಭಾವ ಇದ್ದರೆ, ಈ ಮಹನೀಯರಿಗೆ ಒಂದು ಮಾತನ್ನು ಹೇಳಬೇಕು. ಕಾಂಗ್ರೆಸ್ಸಿನವರಿಗೆ ಆ ಮನೋಭಾವವಿಲ್ಲ. ಈಗಿರತಕ್ಕ ಮೈ ನೂರು ಎಂಬ ಹೆಸರನ್ನು ಯಾವ ದೃಷ್ಟಿಯಿಂದಾಗಲೀ ಬದಲಾವಣೆಯಾಗಬೇಕೆಂಬ ಮನೋಭಾವ ನಮ್ಮದು ಅಲ್ಲ. ಈಗ ನಮ್ಮ ಮುಂದೆ ಇರತಕ್ಕ ಸಮಸ್ಯೆಗಳು ಮುಖ್ಯವಾದುವು ಮೂರು. ದಾರಿದ್ರ್ಯ, ಅವಿದ್ಯೆ, ಅಜ್ಞಾನ. ಈ ಮೂರು ವಿಷಯಗಳಿಗೆ ಹೋರಾಟ ಮಾಡಿದ ಜನ ಇಂಥಾದ್ದಕ್ಕೆ ಹೋರಾಟ ಮಾಡುವುದನ್ನು ನಾನು ಒಪ್ಪುವುದಿಲ್ಲ. ಅದು ಮನುಷ್ಯನ ಸ್ವಭಾವವಲ್ಲ. ಒಂದು ವೇಳೆ ಇದನ್ನು ಬದಲಾವಣೆ ಮಾಡುವುದರಿಂದ ದೇಶಾಭಿವೃದ್ಧಿಯಾಗುವುದಿದ್ದರೆ ಅಂಥಾದ್ದು ದೇಶದಲ್ಲಿ ನಡೆಯುವುದಾದರೆ ಮೊದಲನೆಯದಾಗಿ ನಾನು ಒಪ್ಪಿಕೊಳ್ಳುತ್ತೇನೆ. ಅಂಥಾದ್ದು ಏನೂ ಇಲ್ಲದೇ ಇರುವಾಗ ಏಕೆ ಇಷ್ಟು ದೊಡ್ಡ ಹೋರಾಟ? ಈ ದೇಶದ ಹೆಸರನ್ನು ಕಟ್ಟುವುದಕ್ಕೆ ಮತ್ತು ದೇಶವನ್ನು ಬೆಳೆಸುವುದಕ್ಕೆ ಆಳಿದ ಆಳರನರಾಗಲೀ, ಅಧಿಕಾರ ವರ್ಗದವರಾಗಲೀ ಬಹಳವಾಗಿ ಹಿಂದಿನಿಂದಲೂ ಶ್ರಮಿಸಿದ್ದಾರೆ. ಬಹಳ ಚೆನ್ನಾಗಿರತಕ್ಕ ಹೆಸರನ್ನು ಈ ರಾಜ್ಯಕ್ಕೆ ಕೊಟ್ಟಿದ್ದಾರೆ.

ಶ್ರೀ ಎಂ. ಸಿ. ನರಸಿಂಹನ್.—ಆ ರಾಜ್ಯ ಈಗ ಬಿಟ್ಟುಕೊಟ್ಟೀದ್ದೀರಿ. ಆ ರಾಜ್ಯ ಈಗ ಇಲ್ಲವೇ ಇಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ನಾವು ಈಗ ಅದರಲ್ಲಿಯೇ ಇದ್ದೇವಲ್ಲಾ. ಒಬ್ಬಿಬ್ಬರಗೋಸ್ಕರ ಈ ರಾಜ್ಯವಲ್ಲ. ನಮಗೆಲ್ಲರಿಗೂ ಇದು ಸಂಬಂಧಪಟ್ಟುದು. ಅವರು ಈ ಹೆಸರನ್ನು ಗಳಿಸಿದಂತಹವರು ನಾವಲ್ಲ. ಮೈನೂರು ಎಂಬ ಹೆಸರು ಉಳಿಯಬೇಕೇ ಬೇಡವೇ ಎಂಬುದನ್ನು ಬಹು ದೀರ್ಘವಾಗಿ ಯೋಚಿಸಬೇಕು. ಅಷ್ಟು ಸುಲಭವಾಗಿ ಈಗ ಇರತಕ್ಕ ಹೆಸರನ್ನು ಬದಲಾವಣೆ ಮಾಡಲಿಕ್ಕಾಗಲಾರದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಈಗ ಈ ಬಾಬಿಗೆ ದುಡ್ಡನ್ನು ಖರ್ಚು ಮಾಡಲು ಅಡ್ಡಿಯೇ ಇಲ್ಲವೆಂದು 3–4 ವರ್ಷಗಳಿಂದ ಈ ಬಗ್ಗೆ ಚರ್ಚೆ ಮಾಡುತ್ತಾ ಬೇಕಾದಷ್ಟು ಹಣವನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದೀರಿ. ಅದಕ್ಕೋಸ್ಕರ ಏನಾದರೂ ಒಂದು ರೀತಿ ಜಾಗ್ರತೆಯಾಗಿ ಈ ಬಗ್ಗೆ ತೀರ್ಮಾನ ಮಾಡಿಬಿಡಿ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ನಿರ್ಣಯವನ್ನು ತಂದಿರುವವರು ಕೂಡಲೇ ವಾಪಸ್ಸು ತೆಗೆದುಕೊಳ್ಳಲಿ. ದೇಶದಲ್ಲಿ ಮೊದಲು ಮುಖ್ಯವಾಗಿರತಕ್ಕ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ಮಾಡೋಣ. ಸುಮ್ಮನೆ ರಾಜದಲ್ಲರತಕ್ಕ ವಾತಾವರಣವನ್ನು ಕಲಕಿ ಜನಗಳ ಮನಸ್ಸನ್ನೂ ಸಹ ಕಲಕುವಂತೆ ಮಾಡಬೇಡಿ. ಶ್ರೀಮಾನ್ ದೊಡ್ಡ ಮೇಟಿಯವರು ಹೇಳಿದ್ದನ್ನೆಲ್ಲಾ ನಾನು ಚೆನ್ನಾಗಿ ಕೇಳಿದ್ದೇನೆ. ಮೈಸೂರು ಎಂಬತಕ್ಕ ಬಗ್ಗೆ ವಿಶೇಷವಾಗಿ ವ್ಯಾಖ್ಯಾನ ಮಾಡಿ ಒಂದು ಪುಸ್ತಕವನ್ನೇ ಬರೆದುಕೊಟ್ಟಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಎಂದಿಗೂ ಬರೆದಿಲ್ಲ. ನಾನು ಆ ರೀತಿ ಏನೂ ಹೇಳಿಲ್ಲ. ಅವರ ಮಾತನ್ನು ಯಾರೂ ಒಪ್ಪುವಂತಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ನನ್ನ ಮಿತ್ರರು ಅನೇಕರು ಯಾವುದೋ ಒಂದು ಕಾರಣದಿಂದ ಮೈಸೂರು ಎಂಬ ಹೆಸರು ಬೇಡ ಎಂದು ಹೇಳುವುದು ಸರಿಯಲ್ಲ. ಕರ್ನಾಟಕವೆಂದು ಇರಬೇಕೆಂದು ಹೇಳುವುದಾದರೆ, ಅದರಲ್ಲಿ ಅರ್ಥವೇನು? ಎರಡು ಕೋಟಿ ಜನಾಂಗದ ಆಗುಹೋಗುಗಳನ್ನು ನಾವು ನೀವು ನೋಡಬೇಕಾಗಿದೆ, ಬಗೆಹರಿಸಬೇಕಾಗಿದೆ. ಈಗ ಇಂತಹ ದೊಡ್ಡ ಪ್ರಶ್ನೆ ನಮ್ಮ ಮುಂದೆ ಇದೆ. ನಾವು ಹೋರಾಟ ಮಾಡತಕ್ಕ ವಿಷಯಗಳು ದೇಶದಲ್ಲಿ ಅನೇಕ ವಿವೆ. ಅವನ್ನು ಬಿಟ್ಟು ಈ ಒಂದು ಹೆಸರಿನ ಬದಲಾವಣೆಯನ್ನು ಕುರಿತು ಇಷ್ಟು ಒಂದು ದೊಡ್ಡ ಆಂದೋಳನ ಮಾಡುವುದು ಖಂಡಿತವಾಗಿ ಸರಿಯಲ್ಲ. ಮತ್ತು ನ್ಯಾಯವಲ್ಲ. ಈಗ ತಂದಿರತಕ್ಕ ನಿರ್ಣಯ ಸರಿಯಾದುದಲ್ಲ. ನನ್ನ ಮಾನ್ಯ ಸ್ನೇಹಿತರು ತಮ್ಮ ನಿರ್ಣಯವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು. ಮೈಸೂರು ಎಂದರೆ ಯಾರೂ ತಲೆ ತಗ್ಗಿಸಿ ಬಾಳಬೇಕಾದ ಪ್ರಸಂಗವಿಲ್ಲ. ಇಡಿಯ ಜಗತ್ತಿನಲ್ಲಿ ಇದು ಘನತೆಯನ್ನು ಸಂಪಾದಿಸಿದೆ. ಅನೇಕ ಜನರು ಹಿಂದೆ ಬಹಳವಾಗಿ ದುಡಿದು ಈ ಹೆಸರನ್ನು ಸಂಪಾದಿಸಿದ್ದಾರೆ. ನಮ್ಮ ಮೈಸೂರು ಒಂದು ಸಣ್ಣ ದೇಶವಾಗಿದ್ದರೂ, ಅದರ ಒಂದು ಘನತೆ ಎಲ್ಲೆಲ್ಲಿಯೂ ಆವರಿಸಿದೆ. ಅಂತಹ ದೇಶದ ಮೇಲೆ ಈ ರೀತಿ ವ್ಯಾಖ್ಯಾನ ಮಾಡಿ ಮಾತನಾಡಿದರೆ ಹೇಗೆ?

ಶ್ರೀ ಕೆ. ಪಿ. ರೇವಣ್ಣನಿದ್ದಪ್ಪ.—ಮೈಸೂರು ದೇಶದ ಹೆಸರನ್ನು ಬದಲಾವಣೆ ಮಾಡಲಿಕ್ಕೆ ರಾಜ್ಯ ಪಾಲರ ಅಭಿಪ್ರಾಯವೇನೆಂಬುದು ತಮಗೆಗೊತ್ತೋ?

ಶ್ರೀ ಎಂ. ಕೆ. ಬೊಮ್ಮೇಗೌಡ.—ಅವರ ಅಭಿಪ್ರಾಯವನ್ನು ಕೇಳುವ ಅಗತ್ಯವಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಅವರ ಅಭಿಪ್ರಾಯವನ್ನು ಶ್ರೀಮಾನ್ ಬೊಮ್ಮೇಗೌಡರೇ ಹೇಳುತ್ತಿದ್ದಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಬಹು ಕಾಲದಿಂದ ಈ ಪ್ರಶ್ನೆ ಇಲ್ಲಿ ಚರ್ಚೆಯಾಗಿದೆ. ದೇಶದಲ್ಲಿ ಸಾರ್ವತ್ರಿಕ ಅಭಿಪ್ರಾಯವಿರುವ ಹಾಗೆ ದೇಶದ ಜನಜೀವನದ ಮಟ್ಟ ಹೆಚ್ಚಾಗಬೇಕು. ಯಾವ ಒಂದು ಉದ್ದೇಶ ಸಾಧನೆಗೋಸ್ಕರ ಸ್ವಾತಂತ್ರವನ್ನು ಗಳಿಸಿದೆವೋ ಆ ಉದ್ದೇಶ ಸಫಲವಾಗಬೇಕು. ಪ್ರಪಂಚದಲ್ಲಿ ಇಂಡಿಯಾ ದೇಶಕ್ಕೆ ಒಂದು ಸ್ಥಾನಮಾನವಿದೆ ಎನ್ನುವ ಅಂಶ ಪ್ರತಿಯೊಬ್ಬರಿಗೂ ಗೊತ್ತಿದೆ. ಆದುದರಿಂದ ಕೇವಲ ಈ ಒಂದು ಹೆಸರಿಗಾಗಿ ಹೊಡೆದಾಡುವುದು ಬೇಡ. ಹಿಮಾಲಯ ಪರ್ವತದಿಂದ ಹಿಡಿದು ಕನ್ಯಾಕುಮಾರಿಯ ವರೆಗೆ ನಾವು ಒಂದು ರಾಷ್ಟ್ರದವರು, ನಾವು ಭಾರತೀಯರು ಎಂದು ಹೇಳುವ ಜನ ಏನೋ ಕಾರಣಾಂತರಗಳಿಂದ ರಾಜಕೀಯ ಆದಳಿತಗೋಸ್ಕರವಾಗಿ ಭಾಷಾವಾರು ಪ್ರಾಂತ್ಯ ರಚನೆ ಆಗಬೇಕೆಂದು ಒಂದು ಸಾರಿ ಹಿಂದೆ ಹೇಳಿದ ಮೇಲೆ ನೀವೂ ನಾವೂ ಪುನಃ ಈಗ ಈ ಒಂದು ಹೆಸರಿನ ಬದಲಾವಣೆಗಾಗಿ ತಿಕ್ಕಾಟ ಮಾಡುವುದು ಬೇಡ. ಉತ್ತರ ಪ್ರದೇಶ ಹಿಂದೀ ದೇಶ. ಆದುದರಿಂದ ಅದನ್ನು ಮಾತ್ರ ಹಿಂದೀ ದೇಶವೆಂದು ಏತಕ್ಕೆ ಕರೆಯಬಾರದು? ಅದು ದೊಡ್ಡ ದೊಡ್ಡ ನಾಯಕರಾದಂತಹ, ಶ್ರೀ ಗೋವಿಂದ ಪಂತ್, ಶ್ರೀ ವಲ್ಲಭಾಯ್ ಪಟೇಲ್, ಶ್ರೀ ನೆಹರೂ–ಇಂತಹವರು ಹುಟ್ಟಿದ ಸ್ಥಳ. ಅಂತಹ ಸ್ಥಳಕ್ಕೆ ಅವರ ಹೆಸರನ್ನು ಇಡದೆ ಏತಕ್ಕೆ ಆ ರೀತಿ ಉತ್ತರ ಹಿಂದೂಸ್ಥಾನವೆಂದು ಕರೆಯುತ್ತಾರೆಂಬುದನ್ನು ನಾವು ಯೋಚಿಸಬೇಕು. ಅದು ಬಹು ಕಾಲದಿಂದ ಬಂದಿರತಕ್ಕ ಹೆಸರು.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಮಾಡಿದರೆ ನಾವು ಮಾಡೋಣವೆಂದು ಕುಳಿತಿದ್ದಾರೆ.

ಶ್ರೀ ಎಂ. ಕೆ. ಬೊಮ್ಮೇಗಾಡ.—ಅದು ಹಾಗಿರಲಿ. ಮೈಸೂರು ಕರ್ನಾಟಕವಾಗಬೇಕೆಂದು ಮೈಸೂರಿನ ಹೊರಗಿನವರು ಹೇಳುತ್ತಾರೆ. ಆದ ಕಾರಣ ಇದನ್ನು ದೀರ್ಘವಾಗಿ ವಿಚಾರಮಾಡಿ. ಮೈಸೂರು ಎಂದರೆ ಏನು ಅವಮಾನವಾಗುತ್ತದೆ? ಹೊರಗಿನವರು ಏಕೆ ನಾವು ಮೈಸೂರಿನವರು ಎಂದೆ ನಿಸಿಕೊಳ್ಳುವುದು ಎಂದು ಹೇಳಬಹುದು. ಆದರೆ ಮೈಸೂರಿನೊಳಗೆ ಇರುವವರೂ ಆ ರೀತಿಯೇ ಹೇಳಬೇಕಾದರೆ ಇದರಲ್ಲಿ ಯಾವುದಾದರೂ ಕೆಲವು ರಾಜಕೀಯ ಸನ್ನಿವೇಶಗಳಿರಬಹುದು. ಬಾರ್ಡರ್‌ಗಳಿಂದ ಇವರಿಗೆ ಓಟು ಬರಬಹುದು ಎಂದು ಈ ರೀತಿ ಮಾಡುತ್ತಿದ್ದೇವೆಂದು ಅವಮಾನವಾಗುವುದು ಬೇಡವೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಈಗ ಟೈಂ ಆಯಿತು. ಮುಂದಿನ ಅಧಿವೇಶನದಲ್ಲಿ ಈ ವಿಷಯದ ಮೇಲೆ ಚರ್ಚೆ ಮುಂದುವರಿಯುತ್ತದೆ. ಆಗ ಮುಂದೆ ನೀವೇ ಕಂಟಿನ್ಯೂ ಮಾಡಿ. ಈಗ ನಿಲ್ಲಿಸಿ. ತಮಗೆ ಮತ್ತೊಂದು ಸಾರಿ ಮಾತನಾಡಲು ಆಗ ಅವಕಾಶ ಸಿಕ್ಕುತ್ತದೆ.

12-30 P. M.

STATISTICAL STATEMENT OF QUESTIONS, RESOLUTIONS, HALF-AN-HOUR DISCUSSIONS, ADJOURNMENT MOTIONS, ETC., FOR THE SESSION.

Mr. SPEAKER.—Before we adjourn I have to make one announcement. I have got prepared a consolidated statement *re.* the business transacted during the session.

Starred Questions

No. of Questions tabled	... 553
No. of Questions admitted and sent to Government	... 499
No. of Replies received	... 300
No. of Replies due from Government as on 24/12/59	... 57